ಸುಶೀಲಾ ಪ್ರಕಾಶನದ 44ನೇ ಪುಷ್ಪ

॥ ಶ್ರೀ ದಿಗ್ವಿಜಯರಾಮೋ ವಿಜಯತೇ ॥

ಶ್ರೀ ಮಹಾಲಕ್ಷ್ಮಿ ಮಹಾಮಹಿಮೆ

ಲೇಖಕರು : ಸುಮನಾಬದರೀನಾಥ್, (ಇಂದು ವಿಠಲದಾಸಿ)

ಶ್ರೀ ದಿಗ್ವಿಜಯರಾಮೋ ವಿಜಯತೇ

ಸಮರ್ಪಣೆ

ಶ್ರೀ ಮಹಾಲಕ್ಷ್ಮಿಯ ಮಹಿಮಾ ವಿಶೇಷವನ್ನು ಕೊಂಡಾಡಿ ಒಂದು ಕಿರು ಪುಸ್ತಕ ಬರೆಯಬೇಕೆನ್ನುವ ಬಹು ದಿನಗಳ ಅಭಿಲಾಷೆ ಶ್ರೀ ದೇವಿಯ ಕೃಪೆಯಿಂದ ಕೈಗೂಡಿದೆ. ನನ್ನ ಆರಾಧ್ಯ ದೇವತೆ ಲಕ್ಷ್ಮೀನಾರಾಯಣರ ಅನುಗ್ರಹವೇ, ಬಹು ವರುಷಗಳ ಪೂಜಾಫಲವೇ ಈ ಕೃತಿ ರಚನೆಯ ಪ್ರೇರಕ ಶಕ್ತಿ. ಆ ಮಹಿಮಾನ್ವಿತೆ ಶ್ರೀ ಲಕ್ಷ್ಮೀದೇವಿಯೇ ನನ್ನ ಹೃದಯದಲ್ಲಿ ನಿಂತು ಬರೆಸಿದ್ದಾಳೆಂದರೆ ಅತಿಶಯೋಕ್ತಿಯೇನಲ್ಲ. ಈ ಕೃತಿಯನ್ನು ನನಗೆ "ಇಂದು ವಿಠಲದಾಸಿ" ಎಂಬ **ಅಂಕಿತೋಪದೇಶ ವನ್ನಿತ್ತಿರುವ ಪೂಜ್ಯ ಗುರುಗಳಾದ ವಿದ್ಯಾವಾರಿಧಿ ಡಾ|| ಸತ್ಯಧ್ಯಾನಾಚಾರ್ಯ ಕಟ್ಟಿಯವರ ಪಾದಪಂಕಜಗಳಲ್ಲಿ ಅರ್ಪಿಸಿದ್ದೇನೆ.**

–ಸುಮನ ಬದರೀನಾಥ್

ಬೆಂಗಳೂರು
05–04–2012

ಬಿನ್ನಹ

ಶ್ರೀ ಲಕ್ಷ್ಮೀದೇವಿಯು ಶ್ರೀ ಮನ್ನಾರಾಯಣನ ನಿತ್ಯಾವಿಯೋಗಿನಿಯಾದ ಮಡದಿ. ಅಖಿಲ ಜಗನ್ಮಾತೆ, ಭಾಗ್ಯ ದೇವತೆ. ಶ್ರೀದೇವಿಯ ಮಹಿಮೆಗೆ, ವೈಭವಕ್ಕೆ ಶ್ರೀಹರಿಯ ಹೊರತು ಮತ್ತ್ಯಾರು ಸಮಾಭ್ಯಧಿಕರಿಲ್ಲ. ಮಹಾಲಕ್ಷ್ಮಿಯ ಮಹಾ ಮಹಿಮೆ ಅಭಿವ್ಯಕ್ತಗೊಳ್ಳುವುದು ಸಕಲ ಸಲ್ಲಕ್ಷಣ ಸಂಪನ್ನವೂ ಸಮಸ್ತ ಸಂಪತ್ಪ್ರದಾಯಕವೂ ಸರ್ವ ಮಂಗಳಕಾರಕವೂ ಆದ ಅವಳ ಕಟಾಕ್ಷ ವೀಕ್ಷಣೆ ಯಲ್ಲಿ. ಅದನ್ನು ಪಡೆಯುವುದೇ ಭಕ್ತನ ಪರಮ ಧ್ಯೇಯ. ಲಕ್ಷ್ಮೀಕಟಾಕ್ಷ, ಲಕ್ಷ್ಮೀ ಅನುಗ್ರಹ ಪಡೆಯುವ ಅತ್ಯಂತ ಸುಲಭಮಾರ್ಗವೆಂದರೆ ಲಕ್ಷ್ಮೀ ಸ್ತೋತ್ರಗಳ ಪಠಣೆ. ಹಲವಾರು ತಪಸ್ವಿಗಳು, ಮಂತ್ರಸಿದ್ಧರು ತಮ್ಮ ತಪಸ್ಸಿನ ಫಲವಾಗಿ ಹಲವಾರು ದಿವ್ಯ ಸ್ತೋತ್ರಗಳನ್ನು ಪಡೆದು ನಮಗೆ ನೀಡಿದ್ದಾರೆ. ಈ ಸ್ತೋತ್ರಗಳು ರಚಿಸಿದವರ ತಪಶ್ಶಕ್ತಿಯಿಂದಲೂ, ಮಂತ್ರಸಿದ್ಧಿಯಿಂದಲೂ ಶ್ರದ್ಧಾ ಭಕ್ತಿಯಿಂದಲೂ ಬಹು ಮಹಿಮಾ ಸಂಪನ್ನವಾಗಿರುತ್ತವೆ. ಲಕ್ಷ್ಮೀಸ್ತೋತ್ರಗಳ ಮಹಿಮೆಯೊಡನೆ ಅವುಗಳನ್ನು ಪಠಿಸಿ ಸಿದ್ಧಿ ಪಡೆದ, ಪವಾಡ ತೋರಿದ ದೇವೀ ಭಕ್ತರ ಕಥೆಗಳೂ ಈ ಪುಸ್ತಕದಲ್ಲಿ ಮುತ್ತು ಹವಳಗಳ ಮಾಲೆಯಂತೆ ಒಂದರೊಡನೊಂದು ಹೊಂದಿ ಕೊಂಡು ಬಂದಿವೆ. ದೇವಿಯ ಪಾದಾರವಿಂದಗಳನ್ನು ಅಲಂಕರಿಸಿ ಧನ್ಯತೆ ಪಡೆದಿದೆ

ನನಗೆ ಅಂಕಿತೋಪದೇಶವನ್ನಿತ್ತು ಆಶೀರ್ವದಿಸಿರುವ **ಪೂಜ್ಯ ಗುರುಗಳಾದ ವಿದ್ಯಾವಾರಿಧಿ ಡಾ॥ ಸತ್ಯಧ್ಯಾನಾಚಾರ್ಯ ಕಟ್ಟಿ**ಯವರ ಶ್ರೀಚರಣಗಳಲ್ಲಿ ಅನಂತ ನಮನಗಳು. ಅವರ ಆಶೀರ್ವಾದವೇ ನನಗೂ ನನ್ನ ಪತಿ **ಶ್ರೀ ಬದರೀನಾಥ್** ರವರಿಗೂ ಶ್ರೀ ರಕ್ಷೆ. ಈ ಪುಸ್ತಕ ಪ್ರಕಟನೆಗೆ ಆರ್ಥಿಕ ನೆರವು ನೀಡಿರುವ **ಶ್ರೀ ಪ್ರಕಾಶ್, ಶ್ರೀಮತಿ ಲಕ್ಷ್ಮಿ ದಂಪತಿಗಳು ಹಾಗೂ ಶ್ರೀ ನರಸಿಂಹಮೂರ್ತಿ, ಶ್ರೀಮತಿ ಕುಮುದ ದಂಪತಿಗಳು** ಲಕ್ಷ್ಮೀನಾರಾಯಣರ ದಿವ್ಯ ಪಾದಾರವಿಂದಗಳಲ್ಲಿ ಭಕ್ತಿಯ ಪುಷ್ಪಾಂಜಲಿ ಸಲ್ಲಿಸಿರುತ್ತಾರೆ. ಅವರಿಗೆ ನನ್ನ ಅನೇಕ ಕೃತಜ್ಞತೆಗಳು. ಅವರಿಗೂ ಅವರ ಕುಟುಂಬಗಳಿಗೂ ನನ್ನ ಆರಾಧ್ಯ ದೇವತೆಗಳಾದ ಶ್ರೀ ಲಕ್ಷ್ಮಿನಾರಾಯಣರು ಸಕಲ ಸನ್ಮಂಗಳವನ್ನುಂಟು ಮಾಡಲಿ. ನನ್ನೆಲ್ಲ ಸಾರಸ್ವತ ಸೃಷ್ಟಿಗೆ ಸ್ಫೂರ್ತಿಯ ಸೆಲೆಯಾಗಿರುವ, ಪ್ರೇರಕ ಶಕ್ತಿಯಾಗಿರುವ ನನ್ನ ಪತಿ **ಶ್ರೀ ಎಸ್.ಕೆ. ಬದರೀನಾಥ್** ರವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಪುಸ್ತಕದ ವಾಚಕರೆಲ್ಲರಿಗೂ ದಿವ್ಯ ದಂಪತಿಗಳಾದ ಶ್ರೀ ಲಕ್ಷ್ಮೀನಾರಾಯಣರ ಮಂಗಳಾನುಗ್ರಹವಿರಲಿ.

ಬೆಂಗಳೂರು
05–04–2012

–ಸುಮನ ಬದರೀನಾಥ್

ಶ್ರೀ ಮಹಾಲಕ್ಷ್ಮಿ ಮಹಾಮಹಿಮೆ

ಶ್ರೀಮನ್ನಾರಾಯಣನಿಗೆ ಅನುರೂಪವೂ ಅಭಿಮತವೂ ಆದ ಸ್ವರೂಪ, ಗುಣ, ರೂಪ, ವಿಭವ, ಐಶ್ವರ್ಯ, ಶೀಲಾದಿ ಸಕಲ ಕಲ್ಯಾಣ ಗುಣ ಪರಿಪೂರ್ಣೆ ಲಕ್ಷ್ಮೀದೇವಿ. ಪುರುಷಾಕಾರ ಸ್ವರೂಪಿಣಿ. ಸದಾ ಅನುಗ್ರಹ ಮಯಿ. ನಿತ್ಯಂ ಅಜ್ಞಾತ ನಿಗ್ರಹೆ. ಶ್ರೀನಿವಾಸಸ್ಯ ಕರುಣಾಮಿವ ರೂಪಿಣಿ. ಶ್ರೀ ಎಂದರೆ ಸಂಪತ್ತು. ಶ್ರೀ ಎಂದರೆ ಸೌಂದರ್ಯ.ಶ್ರೀ ಎಂದರೆ ಭಾಗ್ಯದೇವತೆ, ಮಂಗಳದೇವತೆ, ಶ್ರೀ ಎಂದರೆ ಸ್ತ್ರೀ ತತ್ವದ ಎಲ್ಲ ಸದ್ಗುಣಗಳ ಸೌಂದರ್ಯದ ಸಾಕಾರ ಸ್ವರೂಪ. ಲಕ್ಷ್ಮಿಯು ಸದಾ ಶ್ರೀ ನಾಮಕಳು. ಅಷ್ಟ ಲಕ್ಷ್ಮೀ ಸ್ವರೂಪಳಾಗಿ ಸಕಲವಿಧವಾದ ಸೌಭಾಗ್ಯ ಸಂಪತ್ತುಗಳಿಗೂ ಭೋಗಭಾಗ್ಯಗಳಿಗೂ ಅಧಿದೇವತೆ. ನಿಯಾಮಕಳು. ಲಕ್ಷ್ಮೀದೇವಿಯು ಶ್ರೀ ಮನ್ನಾರಾಯಣನ ನಿತ್ಯಾವಿಯೋಗಿನಿ ಯಾದ ಮಡದಿ. ಅಖಿಲ ಜಗನ್ಮಾತೆ. ಅವಳು ನೀಡದ ನೀಡಲಾಗದ ಒಳಿತು ಯಾವುದೂ ಇಲ್ಲವೇ ಇಲ್ಲ. ಶ್ರೀದೇವಿಯ ಮಹಿಮೆಗೆ, ವೈಭವಕ್ಕೆ ಶ್ರೀಹರಿಯ ಹೊರತು ಮತ್ತಾರೂ ಸಮಾಭ್ಯಧಿಕರಿಲ್ಲ. ಅವಳು ಭಗವತಿ, ಭುವನೇಶ್ವರಿ.

ಮಹಾಲಕ್ಷ್ಮಿಯ ಮಹಾಮಹಿಮೆ ಅಭಿವ್ಯಕ್ತಗೊಳ್ಳುವುದು, ಸಕಲ ಸಲ್ಲಕ್ಷಣ ಸಂಪನ್ನವೂ, ಸಮಸ್ತ ಸಂಪತ್ಪ್ರದಾಯಕವೂ, ಸರ್ವಮಂಗಳಕಾರಕವೂ ಆದ ಅವಳ ಕಟಾಕ್ಷ ವೀಕ್ಷಣೆಯಲ್ಲಿ ದಯಾಸಮುದ್ರದ ಅಲೆಗಳಂತಿರುವ ಅವಳ ಕಡೆಗಣ್ಣ ನೋಟವನ್ನು ಪಡೆಯುವುದೇ ಭಕ್ತನ ಪರಮಧ್ಯೇಯ. ತನ್ನನ್ನು ಕರುಣೆ ತುಂಬಿದ ಕುಡಿನೋಟದಿಂದ ನೋಡಬೇಕೆಂಬುದೇ **'ಸಕಲ ಭುವನ ಪ್ರಾರ್ಥನಾ ಕಾಮಧೇನು'** ಎನಿಸಿದ ದೇವಿಯಲ್ಲಿ ಅವನ ಬೇಡಿಕೆ. ಭಕ್ತರೆಲ್ಲರೂ ಶ್ರೀದೇವಿಯನ್ನು ತಮ್ಮ ಮೇಲೆ ಕಟಾಕ್ಷ ಬೀರಬೇಕೆಂದು ಏಕೆ ಪ್ರಾರ್ಥಿಸು ತ್ತಾರೆ? ಲಕ್ಷ್ಮೀಕಟಾಕ್ಷ ಯಾರ ಮೇಲೆ ಬೀಳುತ್ತದೆಯೋ ಅವರ ಇಷ್ಟಾರ್ಥ ಗಳನ್ನು ಭಗವಂತನು ಪ್ರಸಾದಿಸುತ್ತಾನೆ. ಭಗವಂತನು ಒಮ್ಮೊಮ್ಮೆ ನಮ್ಮ ತಪ್ಪುಗಳಿಗಾಗಿ ನಮ್ಮನ್ನು ನಿಗ್ರಹಿಸಬೇಕೆಂಬ ಬುದ್ಧಿಯುಳ್ಳವನಾದಾಗ ಪುರುಷಾಕಾರ ಸ್ವರೂಪಿಣಿಯಾದ ದೇವಿಯು ನಮ್ಮ ಪಕ್ಷವಹಿಸಿ ಆನಿಗ್ರಹ ಬುದ್ಧಿಯನ್ನು ಅನುಗ್ರಹವಾಗಿ ಮಾರ್ಪಡಿಸಿ ಅವನಿಂದಲೇ ನಮ್ಮ

ರಕ್ಷಣೆಯಾಗುವಂತೆ ಮಾಡುತ್ತಾಳೆ. ಹೀಗಾಗಬೇಕಾದರೆ ಅವಳು ನಮ್ಮನ್ನು-ನಮ್ಮ ಸ್ಥಿತಿಯನ್ನು ಕಾಣಬೇಕು. ಅಂದರೆ ಅವಳ ಕಟಾಕ್ಷ ನಮ್ಮ ಮೇಲೆ ಬೀಳಬೇಕು. ಅದರ ಫಲವಾಗಿ ನಾವು ಭಗವದನುಗ್ರಹಕ್ಕೆ ಪಾತ್ರರಾಗುತ್ತೇವೆ. ಲಕ್ಷ್ಮೀದೇವಿಯ ಕಟಾಕ್ಷ ಯಾರ ಮೇಲೆ ಬೀಳುವುದೋ ಅವರು ಸರ್ವ ವಿಧವಾದ ಸಮೃದ್ಧಿಯನ್ನು, ಎಲ್ಲ ಐಹಿಕ ಭೋಗಭಾಗ್ಯಗಳನ್ನು, ಭಗವಂತನ ನಿತ್ಯಕೈಂಕರ್ಯವನ್ನು ಅವಳ ಅನುಗ್ರಹದ ಫಲವಾಗಿ ಪಡೆಯುವರು. ಧನ ಧಾನ್ಯ, ವಿದ್ಯೆ, ಸಂತಾನ, ಯಶಸ್ಸು, ಐಶ್ವರ್ಯ ಆರೋಗ್ಯ ಎಲ್ಲ ವಿಧವಾದ ಸಂಪತ್ತುಗಳೂ, ಅಷ್ಟಲಕ್ಷ್ಮೀ ಸ್ವರೂಪಿಣಿಯ ಅಧೀನ. ದೇವಿಯ ಕಟಾಕ್ಷಗಳು ಎಲ್ಲಿ ಬೀಳುವುದೋ ಅಲ್ಲಿ ಶ್ರೇಯಸ್ಸು, ಅಭ್ಯುದಯ, ಉನ್ನತಿ, ಹಿರಿಮೆ, ಇವೆಲ್ಲಾ ಉಂಟಾಗುವುವು. ಆ ಕಟಾಕ್ಷಗಳಿಗೆ ಪಾತ್ರರಾಗದವರು ಆ ರೀತಿಯ ಉನ್ನತಿ ಪಡೆಯಲಾರರು. **"ಕಿಮಲಭ್ಯತಿ ಭಗವತಿ ಪ್ರಸನ್ನೇ ಶ್ರೀನಿಕೇತನೇ"**

ಲಕ್ಷ್ಮೀಕಟಾಕ್ಷವನ್ನು ಪಡೆಯುವ ಸುಲಭ ಮಾರ್ಗವಾವುದು! ಪೂಜೆ, ಧ್ಯಾನ, ನಾಮಜಪ, ಸ್ತೋತ್ರ ಪಠಣೆ, ವಿಗ್ರಹ ರೂಪದಲ್ಲಿ, ಚಿತ್ರಪಟದಲ್ಲಿ ಕಲಶ ರೂಪದಲ್ಲಿ, ಯಂತ್ರರೂಪದಲ್ಲಿ, ಜ್ಯೋತಿರೂಪದಲ್ಲಿ, ಹೀಗೆ ನಾನಾರೂಪ ಗಳಲ್ಲಿ ದೇವಿಯನ್ನು ಪೂಜಿಸಬಹುದು. ಹರಿದ್ರಾಕುಂಕುಮ, ಪುಷ್ಪ, ಗಂಧ, ಧೂಪ-ದೀಪಾದಿ ಮಂಗಳ ದ್ರವ್ಯಗಳಿಂದ ಕೂಡಿದ ಷೋಡಶೋಪಚಾರ ಪೂಜೆ, ವರಮಹಾಲಕ್ಷ್ಮೀ ವ್ರತ, ಮಾರ್ಗಶಿರ ಮಹಾಲಕ್ಷ್ಮೀವ್ರತ ಮುಂತಾದ ವ್ರತ ನಿಯಾಮಾಚರಣೆ, ಜಪ-ತಪಾನುಷ್ಠಾನ, ಸುಮಂಗಲೀಪೂಜೆ, ಲಕ್ಷ್ಮೀ ಕಟಾಕ್ಷ ಪಡೆಯಲು ನಾನಾ ಮಾರ್ಗಗಳಿವೆ. ಲಕ್ಷ್ಮೀ ಸ್ತೋತ್ರಗಳ ಪಠಣೆ ಮಾಡಿ ಲಕ್ಷ್ಮೀಪ್ರಾರ್ಥನೆ ಮಾಡುವುದು, ಲಕ್ಷ್ಮೀಕಟಾಕ್ಷ, ಲಕ್ಷ್ಮೀ ಅನುಗ್ರಹ ಪಡೆಯಲು ಎಲ್ಲಕ್ಕಿಂತ ಸುಲಭವಾದ ಸಾಧನ ಮಾರ್ಗ. **ಸುಲಭ ಪೂಜೆಯ ಮಾಡಿ, ಬಲವಿಲ್ಲದವರು ಎಂದು ದಾಸಾರ್ಯರು ಹೇಳಿದ್ದಾರಲ್ಲವೇ!**

ಆದರೆ ಸಾಧಕರು ಒಂದು ಮಾತನ್ನು ನೆನಪಿನಲ್ಲಿಡಬೇಕು. ಲಕ್ಷ್ಮೀಪೂಜೆ ಮಾಡುವ ಮುನ್ನ ನಾರಾಯಾಣನ ಪೂಜೆ ಮಾಡಿರಬೇಕು. ನಾರಾಯಾಯಣನನ್ನು ಸ್ತೋತ್ರ ಮಾಡಿಯೇ ಲಕ್ಷ್ಮೀ ಸ್ತೋತ್ರ ಮಾಡಬೇಕು. ಲಕ್ಷ್ಮೀನಾರಾಯಣರು ಸದಾ ಒಟ್ಟಿಗೆ ಇರುವವರು. ಎಂದಿಗೂ ಒಬ್ಬರನ್ನೊಬ್ಬರು ಅಗಲಿ ಇರರು. ಲಕ್ಷ್ಮೀದೇವಿಯು ಪತಿವ್ರತಾ ಶಿರೋಮಣಿ.

ತನ್ನ ಪತಿಯನ್ನು ಪೂಜಿಸಿ ನಂತರ ತನ್ನನ್ನು ಪೂಜಿಸುವುದೇ ಅವಳಿಗೆ ಅತಿಪ್ರಿಯ. ಆಗಲೇ ಅವಳು ನಮ್ಮ ಮೇಲೆ ಅವಳ ಅನುಗ್ರಹ ಪೂರ್ವಕ ಕಟಾಕ್ಷ ಬೀರುತ್ತಾಳೆ.

ಕಲಿಯುಗದಲ್ಲಿ ನಾಮಜಪಕ್ಕೆ, ಸ್ತೋತ್ರ ಪಠಣೆಗೆ, ಸಾಮೂಹಿಕ ಭಜನೆಗಳಿಗೆ ವಿಶೇಷ ಮಹತ್ವವಿದೆ. ಅಲ್ಪ ಶ್ರಮದಿಂದಲೇ ಮಹಾಫಲವನ್ನು ಕೊಡುವ ಸಾಧನೆಯ ಸುಲಭಮಾರ್ಗವಿದು. ಅನುಷ್ಠಾನಕ್ಕೆ ಸುಲಭ. ದ್ರವ್ಯದ ಅವಶ್ಯಕತೆಯಿಲ್ಲ. ದೇಶಕಾಲಗಳ ನಿಯಮವಿಲ್ಲ. ಅಧಿಕ ಮಾನ್ಯತೆಯ ಯಜ್ಞವಿದು ಎಂದು ಶಾಸ್ತ್ರ ಗ್ರಂಥಗಳಲ್ಲಿ ಹೇಳಿದ್ದಾರೆ. ಹಲವಾರು ತಪಸ್ವಿಗಳು, ಮಂತ್ರಸಿದ್ಧರು, ಮಹಾನುಭಾವರು ತಮ್ಮ ತಪಸ್ಸಿನ ಫಲವಾಗಿ ಹಲವಾರು ದಿವ್ಯ ಸ್ತೋತ್ರಗಳನ್ನು ಪಡೆದು ರಚಿಸಿ ನಮಗೆ ನೀಡಿದ್ದಾರೆ. ಈ ಸ್ತೋತ್ರಗಳು ರಚಿಸಿದವರ ತಪಶಕ್ತಿಯಿಂದಲೂ ಮಂತ್ರ ಸಿದ್ಧಿಯಿಂದಲೂ, ಶ್ರದ್ಧಾಭಕ್ತಿಯಿಂದಲೂ ಬಹು ಮಹಿಮಾ ಸಂಪನ್ನವಾಗಿರುತ್ತವೆ. ಅನೇಕ ವೇಳೆ ಆ ಸ್ತೋತ್ರಗಳ ರಚನೆಗೆ ಹಿನ್ನೆಲೆಯಾಗಿ ಘಟನೆಗಳ ಕಥೆಗಳಿರುತ್ತವೆ. ಆ ಸ್ತೋತ್ರವನ್ನು ಪಠಣೆ ಮಾಡುವಾಗ ಆ ಹಿನ್ನಲೆಯ ಕಥೆಯನ್ನರಿತು ಅದನ್ನು ರಚಿಸಿದವರ ಮಂತ್ರಸಿದ್ಧಿಯನ್ನು ಮನಸ್ಸಿಗೆ ತಂದುಕೊಂಡು ಅದು ತೋರಿದ ಮಹಿಮೆಯನ್ನು ತಿಳಿದು ಪಠಿಸುವಾಗ ಶ್ರದ್ಧೆ ಹೆಚ್ಚುತ್ತದೆ. ಅದನ್ನು ರಚಿಸಿದವರ ತಪ ಶಕ್ತಿಯೂ ಪ್ರಸಾದವೂ ನಮ್ಮ ಮೇಲೆ ಹರಿದು ಬಂದು ದೇವಾನುಗ್ರಹ ಶೀಘ್ರವಾಗಿ ದೊರೆಯುತ್ತದೆ.

ಲಕ್ಷ್ಮೀದೇವಿಯ ಮಹಿಮೆಯನ್ನು ಪ್ರತಿಪಾದಿಸುವ ಅಸಂಖ್ಯ ಸ್ತೋತ್ರಗಳಿವೆ. ಶ್ರೀಸೂಕ್ತ, ಲಕ್ಷ್ಮೀಹೃದಯ, ಲಕ್ಷ್ಮೀಸಹಸ್ರನಾಮ, ಲಕ್ಷ್ಮೀ ಅಷ್ಟೋತ್ತರ ನಾಮ ಮುಂತಾದ ದಿವ್ಯ ಸ್ತೋತ್ರಗಳು, ಪ್ರಾಚೀನ ಕಾಲದಿಂದಲೂ ಲಕ್ಷ್ಮೀ ಅನುಗ್ರಹ ಸಂಪಾದನೆಗಾಗಿ ಬಳಸಲ್ಪಟ್ಟಿವೆ. ವೇದೋಕ್ತ, ಶಾಸ್ತೋಕ್ತ ಸ್ತೋತ್ರಗಳಿಂದ ಪ್ರಾರಂಭವಾದ ಲಕ್ಷ್ಮೀಸ್ತೋತ್ರಾತ್ಮಕವಾದ ಈ ಪ್ರವಾಹವು ಇಂದಿನ ವರೆಗೂ ತುಂಬು ಹೊಳೆಯಂತೆ ಹರಿದಿದೆ. ಅನೇಕ ಆಚಾರ್ಯರು, ಭಕ್ತರು, ತಪಸ್ವಿಗಳು ಶ್ರೀದೇವಿಯನ್ನು ನಾನಾಬಗೆಯಾಗಿ, ಶಾಸ್ತ್ರೀಯವಾಗಿ ಸ್ತೋತ್ರ ಮಾಡಿದ್ಧಾರೆ. ಅವುಗಳಲ್ಲಿ ಕೆಲವು ಅವುಗಳನ್ನು ರಚಿಸಿದವರ ತಪ ಶಕ್ತಿ

ಯಿಂದಲೂ, ಮಂತ್ರಸಿದ್ಧಿಯಿಂದಲೂ ಬಹು ಮಹಿಮಾ ಸಂಪನ್ನವಾಗಿರುತ್ತವೆ. ಜಗನ್ಮಾತೆ ಲಕ್ಷ್ಮಿಯ ಅನುಗ್ರಹವನ್ನು ಸಂಪಾದಿಸಲು, ಅದು ನಮ್ಮೆಡೆಗೆ ಹರಿದು ಬರುವಂತೆ ಮಾಡಲು ಈ ಸ್ತೋತ್ರಗಳನ್ನು ಶ್ರದ್ಧಾ ಭಕ್ತಿಗಳಿಂದ ಪಠಿಸಿ ತಾಯಿಯ ಕೃಪಾದೃಷ್ಟಿಗೆ ಪ್ರಾರ್ಥಿಸಬಹುದು.

ಸ್ತೋತ್ರಗಳು ನಾಮ ಸ್ಮರಣೆಯ ಇನ್ನೊಂದು ರೂಪವಷ್ಟೆ. ಸ್ತೋತ್ರಗಳಲ್ಲಿ ನಾಮ ಸ್ಮರಣೆಯೊಡನೆ ದೇವಿಯ ರೂಪ ವೈಭವ ಸ್ವರೂಪಗುಣಶೀಲಾದಿ ಅಸಂಖ್ಯ ಕಲ್ಯಾಣ ಗುಣಗಳ ಸ್ಮರಣೆಯೂ, ಭಕ್ತಹೃದಯದ ಭಾವ ತರಂಗಗಳೂ ದಿವ್ಯಗಾನವೂ ಸೇರಿ ಮುಪ್ಪುರಿಗೊಂಡು ದೇವಿಯನ್ನು ಪ್ರಸನ್ನಗೊಳಿಸಿ ಸ್ತೋತ್ರದ ಅನುಗ್ರಹ ಶಕ್ತಿಯು ಹೆಚ್ಚುತ್ತದೆ. ನಾಮ ಪಾರಾಯಣ ಪ್ರೀತೆಯಾದ ದೇವಿ ತನ್ನನ್ನು ಸ್ತುತಿಸುವವರನ್ನು ನಿಸ್ಸಂದೇಹವಾಗಿ ಕಾಪಾಡುವಳು. ವರ ನೀಡುವಳು. ಲಕ್ಷ್ಮೀ ಸ್ತೋತ್ರಗಳ ಪಠಣೆಯಿಂದ ಸಕಲ ಸೌಭಾಗ್ಯಗಳನ್ನು, ಅನಿಷ್ಟ ಪರಿಹಾರ ಇಷ್ಟಾರ್ಥ ಸಿದ್ಧಿಗಳನ್ನು ಪಡೆಯಬಹುದು. ಸ್ತೋತ್ರ ಪಠಣೆ ಎಂದೂ ನಿಷ್ಫಲವಲ್ಲ. ನಮ್ಮನ್ನು ಕಾಪಾಡುವುದಲ್ಲದೆ ನಮ್ಮ ಸಂತಾನವನ್ನೂ ಕಾಪಾಡುತ್ತದೆ. ಜನ್ಮ ಜನ್ಮಾಂತರಗಳಲ್ಲೂ ನಮ್ಮೊಡನಿದ್ದು ನಮ್ಮನ್ನು ರಕ್ಷಿಸುತ್ತದೆ.

ಲಕ್ಷ್ಮಿ ಸ್ತೋತ್ರಗಳನ್ನು ರಚಿಸಿ ಸಿದ್ಧಿ ಪಡೆದ ಮಹಾನುಭಾವರಿರುವಂತೆಯೇ ಲಕ್ಷ್ಮೀಸ್ತೋತ್ರಗಳನ್ನು ಪಠಿಸಿ ಪಾರಾಯಣ ಮಾಡಿ ದೇವಿಯನ್ನು ಒಲಿಸಿಕೊಂಡ ಪವಾಡಗಳನ್ನು ತೋರಿದ ಭಕ್ತರ ಕಥೆಗಳೂ ಅನೇಕವಿದೆ. ಅಂತಹ ಮಹಾಪುರುಷರ ಜೀವನ ಕಥಾನಕಗಳೂ ನಮಗೆ ಸಾಧನೆಯ ಮಾರ್ಗದಲ್ಲಿ ಬೆಳಕು ತೋರುವ ದಾರಿದೀಪಗಳು. ಅಂತಹ ಕಥೆಗಳನ್ನು ಓದುವುದರಿಂದಲೂ ಕೇಳುವುದರಿಂದಲೂ ನಮ್ಮಲ್ಲಿ ಭಕ್ತಿಶ್ರದ್ಧೆಗಳು ಹೆಚ್ಚುತ್ತವೆ. ದೇವಿಯ ಭಕ್ತರನ್ನು ಸ್ತುತಿಸುವುದೂ ದೇವಿಯ ಅನುಗ್ರಹಕ್ಕೆ ದಾರಿ. ಅದೂ ಅವಳಿಗೆ ಮೆಚ್ಚಿಕೆಯೆ.

ಲಕ್ಷ್ಮೀ ಸ್ತೋತ್ರಗಳ ಮಹಿಮೆಯೊಡನೆ ಅವುಗಳನ್ನು ಪಠಿಸಿ ಸಿದ್ಧಿ ಪಡೆದ, ಪವಾಡ ತೋರಿದ ದೇವಿಭಕ್ತರ ಕಥೆಗಳೂ ಈ ಪುಸ್ತಕದಲ್ಲಿ ಮುತ್ತು ಹವಳಗಳ ಮಾಲೆಯಂತೆ ಒಂದರೊಡನೊಂದು ಹೊಂದಿಕೊಂಡು ಬಂದಿವೆ. ದೇವಿಯ ಪಾದಾರವಿಂದಗಳನ್ನು ಅಲಂಕರಿಸಿ ಧನ್ಯತೆ ಪಡೆದಿವೆ.

ಲಕ್ಷ್ಮೀ ಪ್ರಾದುರ್ಭಾವ ಮತ್ತು ಕಲ್ಯಾಣ

ಲಕ್ಷ್ಮೀದೇವಿಯನ್ನು ಕ್ಷೀರಸಾಗರ ಕನ್ಯಕೆ ಎಂದೂ ವಿಷ್ಣು ವಕ್ಷಸ್ಥಲಸ್ಥಿತೆ ಎಂದು ಕರೆದು ಪೂಜಿಸುತ್ತೇವೆ. ಶ್ರೀದೇವಿಯನ್ನು ಮೂರು ಸ್ವರೂಪದಲ್ಲಿ ಆರಾಧಿಸಬಹುದು. ನಾರಾಯಣನ ಪಕ್ಕದಲ್ಲಿ ನಿಂತಿರುವಂತೆ, ಪರ್ಯಂಕ ಸದೃಶವಾದ ಪತಿಯ ತೊಡೆಯಲ್ಲಿ ಕುಳಿತಿರುವಂತೆ, ವಿಷ್ಣು ವಕ್ಷಸ್ಥಳದಲ್ಲಿ ವಿರಾಜಿಸುತ್ತಿರುವಂತೆ. ಭೂ ವೈಕುಂಠವೆನಿಸಿದ ತಿರುಪತಿಯಲ್ಲಿ ದೇವಿಗೆ ಪ್ರತ್ಯೇಕ ಸನ್ನಿಧಿಯಿಲ್ಲ. ಶ್ರೀನಿವಾಸನ ವಕ್ಷಸ್ಥಲದಲ್ಲಿ ವ್ಯೂಹ ಲಕ್ಷ್ಮಿ ಎಂದು ಪೂಜಿಸುತ್ತಾರೆ. ನಾಚಿಯಾರ್ ಕೋಯಿಲ್ ಎಂಬ ಊರಿನಲ್ಲಿ ನಂಬಿನಾರಾಯಣನ ಎದೆಯಲ್ಲಿರುವ ಲಕ್ಷ್ಮಿ ವಿಗ್ರಹ ನಯನ ಮನೋಹರ ವಾಗಿದೆ. ಹಲವಾರು ದೇವಸ್ಥಾನಗಳಲ್ಲಿ ನಾವು ವಿಷ್ಣುವಿನ ವಕ್ಷಸ್ಥಲದಲ್ಲಿ ಲಕ್ಷ್ಮೀಯನ್ನು ಪೂಜಿಸುವುದನ್ನು ನೋಡಬಹುದಾಗಿದೆ. ಶ್ರೀಲಕ್ಷ್ಮೀಯು ಕ್ಷೀರಾಬ್ಧಿಕನ್ನಿಕೆಯಾಗಿ ಅವತರಿಸಿ, ಶ್ರೀ ಮನ್ನಾರಾಯಣನನ್ನು ಪತಿಯೆಂದು ವರಿಸಿ ಅವನ ವಕ್ಷಸ್ಥಲದಲ್ಲಿ ನೆಲಸಿ, ಪತಿ ಸಾಮೀಪ್ಯದಿಂದುಂಟಾದ ಆನಂದದಿಂದ ಅಧಿಕ ಶಕ್ತಿಯಿಂದ ತುಂಬಿದ, ಮಹದ್‌ಭಾಗ್ಯವನ್ನು ಕೊಡುವ ತನ್ನ ಕಡೆಗಣ್ಣ ನೋಟದಿಂದ ದೇವತೆಗಳನ್ನು ಅನುಗ್ರಹಿಸಿದ ಮಂಗಳ ಕಥನ ಶ್ರೀ ಮದ್ಭಾಗವತ, ಮತ್ತು ವಿಷ್ಣು ಪುರಾಣಗಳಲ್ಲಿ ರಸರಮಣೀಯವಾಗಿ ವರ್ಣಿತವಾಗಿದೆ.

ವೈವಸ್ವತ ಮನ್ವಂತರದ ಆದಿಯಲ್ಲಿ ಒಮ್ಮೆ ದೂರ್ವಾಸ ಮಹರ್ಷಿಗಳು, ದಿವ್ಯೋನ್ಮಾದದಿಂದ ಸ್ವರ್ಗಲೋಕದಲ್ಲಿ ಸಂಚರಿಸುತ್ತಿರಲು, ಮಾರ್ಗ ಮಧ್ಯದಲ್ಲಿ ಲಕ್ಷ್ಮೀದೇವಿಯ ಸಖಿಯೊಬ್ಬಳು ದೇವಿ ಧರಿಸಿದ್ಧ ಹೂಮಾಲೆ ಯೊಂದನ್ನು ಹಿಡಿದುಕೊಂಡು ಎದುರಾಗಿ ಬಂದಳು. ದೂರ್ವಾಸರು ಆ ಹೂಮಾಲಿಕೆಗೆ ಕೈಮುಗಿದು ನಮಿಸಿ, ಅವಳಿಂದ ಲಕ್ಷ್ಮೀ ಪ್ರಸಾದವೆಂದು ಅದನ್ನು ಪಡೆದರು. ಆ ಮಾಲೆ ಅದೆತಾನೆ ಅರಳಿದಂತೆ ನಯನ ಮನೋಹರ ವಾಗಿ ನಳಿನಳಿಸುತ್ತಾ ದಿವ್ಯ ಸುಗಂಧವನ್ನು ಬೀರುತ್ತಿತ್ತು. ಅದನ್ನು ಶಿರಸ್ಸಿನಲ್ಲಿ ಧರಿಸಿ, ದೂರ್ವಾಸರು ಬರುತ್ತಿರಲು, ಸ್ವರ್ಗಾಧಿಪತಿಯಾದ ದೇವೇಂದ್ರನು, ಐರಾವತದ ಮೇಲೆ ಕುಳಿತು ದೇವತೆಗಳೊಡನೆ ಮಹಾವೈಭವದಿಂದ ಬರುತ್ತಿರುವುದನ್ನು ನೋಡಿ, ಲಕ್ಷ್ಮೀಪ್ರಸಾದ ಅವನಿಗೆ ಲಭ್ಯವಾಗಲೆಂದು ಆ ಹೂಮಾಲೆಯನ್ನು ಅವನಿಗೆ ಕೊಟ್ಟರು. ಐಶ್ವರ್ಯದಿಂದ ಮದೋನ್ಮತ್ತ

ನಾಗಿದ್ಧ ದೇವೇಂದ್ರನು ಹೂಮಾಲೆಯನ್ನು ಕಣ್ಣಿಗೊತ್ತಿಕೊಂಡು ಸ್ವೀಕರಿಸುವುದರ ಬದಲು ಅಲಕ್ಷ್ಯದಿಂದ ಆನೆಯ ತಲೆಯ ಮೇಲಿಟ್ಟನು. ಉನ್ಮತ್ಥವಾಗಿದ್ದ ಆ ಆನೆಯು ಹೂಮಾಲೆಯನ್ನು ಸೊಂಡಲಿನಿಂದ ಎಳೆದು ಮೂಸಿನೋಡಿ, ನೆಲದ ಮೇಲೆಸೆದು ಕಾಲಿನಿಂದ ತುಳಿಯಿತು. ಲಕ್ಷ್ಮೀದೇವಿಯ ಪ್ರಸಾದಕ್ಕಾದ ಆ ಅವಮಾನವನ್ನು ಕಂಡು ಬಹುವಾಗಿ ಕೋಪಗೊಂಡ ದೂರ್ವಾಸ ಮುನಿಗಳು ದೇವೇಂದ್ರನಿಗೆ "ಐಶ್ವರ್ಯ ಮದದಿಂದ ನೀನು ದುರಹಂಕಾರಿಯಾಗಿದ್ದೀಯ. ಲಕ್ಷ್ಮೀಗೆ ವಾಸಸ್ಥಾನ ವಾದದ್ದು ಈ ಪುಷ್ಪಮಾಲೆ. ಅದನ್ನೂ ನನ್ನನ್ನೂ ಅವಮಾನಿಸಿದ್ದರಿಂದ ನೀನು ನಿಶ್ರೀಕನಾಗು, ನಿನ್ನ ತ್ರಿಲೋಕಾಧಿಪತ್ಯದ ಸಂಪತ್ತು ನಾಶವಾಗಲಿ" ಎಂದು ಶಪಿಸಿದರು. ಇಂದ್ರನು ಎಷ್ಟು ಬೇಡಿಕೊಂಡರೂ ಶಾಂತರಾಗದೆ ಹೊರಟು ಹೋದರು. ಲಕ್ಷ್ಮೀಯು ಅಂತರ್ಹಿತಳಾದಳು. ಇಂದ್ರನನ್ನು ಸ್ವರ್ಗಲಕ್ಷ್ಮಿಯೂ ರಾಜ್ಯ ಲಕ್ಷ್ಮೀಯೂ ತ್ಯಜಿಸಿದರು. ಐಶ್ವರ್ಯವೆಲ್ಲವೂ ಮಾಯವಾಯಿತು. ಲೋಕತ್ರಯವೂ ಸಂಪದ್ರಹಿತವಾಗಲು, ದೂರ್ವಾಸ ರಿಂದ ಇಂದ್ರನಿಗೆ ಬಂದ ಶಾಪದ ಬಗ್ಗೆ ತಿಳಿದ ದೈತ್ಯರು ಬಲಿಯ ಮುಂಚೂಣಿತ್ವದಲ್ಲಿ ಅಮರಾವತಿಯನ್ನು ಮುತ್ತಿ ಇಂದ್ರನನ್ನು ಪರಾಜಯ ಗೊಳಿಸಿ ದೇವಲೋಕವನ್ನು ಆಕ್ರಮಿಸಿದರು. ದೇವತೆಗಳು ನಾನಾ ಕಷ್ಟಗಳಿಗೆ ಗುರಿಯಾದರು. ದಾರಿಗಾಣದೆ ದೇವತೆಗಳೆಲ್ಲ ಬ್ರಹ್ಮನೊಡಗೂಡಿ ಕ್ಷೀರಸಾಗರದ ಬಳಿಗೆ ಬಂದು ಶ್ರೀಮನ್ನಾರಾಯಣನನ್ನು ಬಗೆಬಗೆಯಾಗಿ ಸ್ತೋತ್ರ ಮಾಡಿ ಶರಣಾದರು. ಪ್ರಸನ್ನನಾದ ಶ್ರೀಹರಿಯು ದೇವತೆಗಳಿಗೆ ಪ್ರತ್ಯಕ್ಷನಾಗಿ "ಲಕ್ಷ್ಮೀಯು ಅಂತರ್ಹಿತಳಾಗಿರುವುದರಿಂದ ಅವಳ ಕಟಾಕ್ಷ ಬೀಳದೆ ಸರ್ವಸಂಪತ್ತುಗಳೂ ಕಣ್ಮರೆಯಾಗಿವೆ. ಮತ್ತೆ ಲೋಕವು ಸಂಪದ್ಭರಿತವಾಗಲು ದೇವಿಯು ಬಹಿರ್ಮುಖಿವಾಗಿ ಎಲ್ಲವನ್ನು ಕಟಾಕ್ಷಿಸ ಬೇಕು, ಇದಕ್ಕೆ ಇರುವ ಏಕೈಕ ಮಾರ್ಗವೆಂದರೆ ಕ್ಷೀರ ಸಾಗರ ಮಥನ ಮಾಡುವುದು. ನೀವು ದೈತ್ಯ-ದಾನವರೊಡನೆ ಸೇರಿ, ಅಮೃತೋತ್ಪಾದನೆ ಗಾಗಿ ಸಕಲ ಮಾಲಿಕೆಗಳನ್ನೂ ತಂದು ಕ್ಷೀರಸಮುದ್ರದಲ್ಲಿ ಹಾಕಿ, ಮಂದರ ಪರ್ವತವನ್ನು ಕಡೆಗೋಲನ್ನಾಗಿಯೂ, ವಾಸುಕಿಯುನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು ಅಮೃತಕ್ಕಾಗಿ ಸಮುದ್ರವನ್ನು ಕಡೆಯಿರಿ. ಆ ಸಮಯದಲ್ಲಿ ದೂರ್ವಾಸರೂ ಸೇರಿದಂತೆ ಋಷಿಮುನಿಗಳೆಲ್ಲ ಶ್ರೀ ಸೂಕ್ತಾದಿ ಲಕ್ಷ್ಮೀಮಂತ್ರಗಳನ್ನು ಲಕ್ಷ್ಮೀ ಪ್ರಾದುರ್ಭಾವಕ್ಕಾಗಿ ಪಠಿಸುವರು.

ಅಂದಿಗೆ ದೂರ್ವಾಸರಿತ್ತಿದ್ದ ಶಾಪ ವಿಶಾಪವಾಗಿ ಪರಿಣಮಿಸಿ. ಶ್ರೀ ಮಹಾಲಕ್ಷ್ಮೀದೇವಿಯು ಹದಿನಾಲ್ಕು ಶ್ರೇಷ್ಠ ರತ್ನಗಳೊಂದಿಗೆ ಕ್ಷೀರಸಾಗರ ದಿಂದ ಹೊರಬರುವಳು ಮತ್ತು ನನ್ನ ವಕ್ಷಸ್ಥಳಕ್ಕೆ ಬಂದು ನೆಲಸುವಳು. ಎಲ್ಲೆಡೆ ತನ್ನ ಭಾಗ್ಯ ಕೊಡುವ ಕಟಾಕ್ಷ ಬೀರುವಳು. ಆಗ ಲೋಕವೆಲ್ಲ ಮೊದಲಿನಂತೆ ಐಶ್ವರ್ಯಭರಿತವಾಗುತ್ತದೆ. ದೇವೇಂದ್ರನು ಮತ್ತೆ ಸ್ವರ್ಗಾಧಿಪತ್ಯವನ್ನು ಪಡೆಯುವನು ಎಂದು ಅಭಯ ನೀಡಿದನು. ವಿಷ್ಣುವಿನ ಆಜ್ಞೆಯಂತೆ ದೇವತೆಗಳು ಮತ್ತು ರಾಕ್ಷಸರು ಸೇರಿ ಕ್ಷೀರಸಾಗರವನ್ನು ಕಡೆಯುತ್ತಿರಲು, ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಚಂದ್ರ, ಪಾರಿಜಾತ, ಅಪ್ಸರಸ್ತ್ರೀಯರು ಎಲ್ಲವೂ ಒಂದೊಂದಾಗಿ ಹೊರಬಂದವು. ಋಷಿ ಮುನಿಗಳು ಲಕ್ಷ್ಮೀ ಮಂತ್ರಗಳನ್ನು ಪಠಿಸುತ್ತಿರಲು, ದೇವತೆಗಳೆಲ್ಲ ಮೈಯಲ್ಲಾ ಕಣ್ಣಾಗಿ ಕಾತುರ ದಿಂದ ದೇವಿಯ ಪ್ರಾದುರ್ಭಾವಕ್ಕಾಗಿ ಕಾಯುತ್ತಿರಲು, ಭಗವಂತನು ಮಂದ ಸ್ಮಿತ ಬೀರುತ್ತಿರಲು ಇದ್ದಕ್ಕಿದ್ದಂತೆಯೇ ದಿಕ್ಕುಗಳೆಲ್ಲ ಪ್ರಸನ್ನಗೊಂಡವು. ಎಲ್ಲೆಲ್ಲೂ ಉತ್ಸಾಹ, ಸಂತಸ, ಸಡಗರಗಳು ಚೆಲ್ಲಾಡುತ್ತಿರಲು ಅಪೂರ್ವ ಸೌಂದರ್ಯದಿಂದ ಶೋಭಿಸುತ್ತಿದ್ದ, ಪೂರ್ಣವಿಕಸಿತಗೊಂಡ ಅರುಣ ವರ್ಣದ ಸಹಸ್ರದಳ ಪದ್ಮವೊಂದು ಕ್ಷೀರಸಾಗರದಿಂದ ಮೆಲ್ಲಮೆಲ್ಲನೆ ಮೇಲೆದ್ದು ಬಂತು. ದಿಕ್ಕುದಿಕ್ಕುಗಳನ್ನೂ, ತನ್ನ ಮಂದಹಾಸದ ಬೆಳಕಿನಿಂದ ಮೈಕಾಂತಿಯಿಂದ ಬೆಳಗುತ್ತಾ ಕೈಯಲ್ಲಿ ಲೀಲಾಕಮಲವನ್ನು ಹಿಡಿದು ಲಕ್ಷ್ಮೀದೇವಿಯು ಆ ಕಮಲ ಮಧ್ಯದಲ್ಲಿ ಕಾಣಿಸಿಕೊಂಡಳು. ಎಲ್ಲೆಲ್ಲೂ ಜಯಘೋಷ, ಸಂಭ್ರಮ. ಮಹರ್ಷಿಗಳು ಅವಳನ್ನು ದಿವ್ಯ ಸ್ತೋತ್ರಗಳಿಂದ ಸ್ತುತಿಸಿದರು. ಗಂಧರ್ವರು, ಅಪ್ಸರಸ್ತ್ರೀಯರು ಹಾಡಿ ನಲಿದರು. ಗಂಗಾದಿ ನದಿಗಳು ಪವಿತ್ರ ಜಲವನ್ನು ಸ್ನಾನಾರ್ಥವಾಗಿ ತಂದವು. ದಿಗ್ಗಜಗಳು ರತ್ನಖಚಿತವಾದ ಸ್ವರ್ಣಕಲಶಗಳಲ್ಲಿ ಆಪೂತಜಲವನ್ನು ತುಂಬಿಕೊಂಡು ಸರ್ವಲೋಕ ಮಹೇಶ್ವರಿಯಾದ ದೇವಿಗೆ ಅಭಿಷೇಕ ಮಾಡಿದವು.

ಕ್ಷೀರಸಾಗರನು ಎಂದೆಂದೂ ಬಾಡದ ಪದ್ಮಮಾಲೆಯನ್ನು ಅರ್ಪಿಸಿದನು. ವಿಶ್ವಕರ್ಮನು ಅಪೂರ್ವವಾದ ದಿವ್ಯಾಭರಣಗಳನ್ನು ಸಮರ್ಪಿಸಿದನು. ದೇವಿಯು ಶುಭ್ರಸ್ನಾತಳಾಗಿ, ದಿವ್ಯ ವಸ್ತ್ರಾಭರಣಗಳಿಂದ ಅಲಂಕೃತಳಾಗಿ ಎಲ್ಲ ದೇವತೆಗಳು ನೋಡುತ್ತಿರುವಾಗಲೇ, ಶ್ರೀಹರಿಗೆ ದಿವ್ಯ ವರಣಮಾಲೆಯನ್ನರ್ಪಿಸಿ ಅವನ ಪಕ್ಕದಲ್ಲಿ ನಿಂತಳು. ಭಗವಂತನು ಅವಳ ಇಂಗಿತವನ್ನರಿತು ಅವಳನ್ನು ಸ್ವೀಕರಿಸಿ ತನ್ನ ವಕ್ಷಸ್ಥಳದಲ್ಲಿ ಧರಿಸಿದನು. ವಿಷ್ಣುವಕ್ಷಸ್ಥಳಸ್ಥಿತೆಯಾದ ಲಕ್ಷ್ಮೀ

ದೇವಿಯು ಸರ್ವ ಸಂಪತ್ಪ್ರದಾಯಕವಾದ ತನ್ನ ಕುಡಿನೋಟದಿಂದ ದೇವತೆಗಳನ್ನು ಒಮ್ಮೆ ಅವಲೋಕಿಸಿದಳು. ಕೂಡಲೇ ತ್ರಿಲೋಕವು ಲಕ್ಷ್ಮೀಯುಕ್ತವಾಗಿ ಸಮೃದ್ಧಿಯಿಂದ ವಿರಾಜಿಸಿತು. ಇಂದ್ರನು ತನ್ನ ರಾಜ್ಯವನ್ನೂ ಸಂಪತ್ತನ್ನೂ ಮತ್ತೆ ಪಡೆದನು. ನಂತರ ಅವನು ತನ್ನ ಈ ಸಂಪದಕ್ಕೆ ಕಾರಣಳಾದ ಲಕ್ಷ್ಮೀದೇವಿಯನ್ನು ನಾನಾ ವಿಧವಾಗಿ ಸ್ತುತಿಸಿದನು. ಈ ಸ್ತೋತ್ರವು ದೇವೇಂದ್ರ ಕೃತ ಮಹಾಲಕ್ಷ್ಮೀ ಸ್ತೋತ್ರವೆಂದು ಪ್ರಸಿದ್ಧವಾಗಿದೆ. ವರಪ್ರಸಾದಿಯೆಂದು. ಮಹಿಮಾನ್ವಿತವೆಂದು ಪ್ರಖ್ಯಾತವಾಗಿದೆ. ವಿಷ್ಣು ಪುರಾಣದಲ್ಲಿ ಈ ಸ್ತೋತ್ರವು ಬರುತ್ತದೆ. ಅವನ ಸ್ತುತಿಯಿಂದ ಸಂತುಷ್ಟಳಾದ ಶ್ರೀದೇವಿಯು ನಿನಗೆ ಬೇಕಾದ ವರವನ್ನು ಕೇಳಿಕೋ ವರಪ್ರದಾನ ಮಾಡುವೆನೆನ್ನಲು ದೇವೇಂದ್ರನು ನಾನು ಹೇಳಿದ ಈ ಸ್ತೋತ್ರದಿಂದ ನಿನ್ನನ್ನು ಸ್ತುತಿಸುವವರನ್ನು ಸಂಪತ್ತಿನಿಂದ ಅನುಗ್ರಹಿಸು ಎಂದು ಬೇಡಿದನು. ದೇವೇಂದ್ರನ ಪ್ರಾರ್ಥನೆಗೆ ಮೆಚ್ಚಿ ಸುಪ್ರಸನ್ನಳಾದ ದೇವಿಯು ಅವನಿಗೆ ಸರ್ವಸಂಪತ್ತನ್ನೂ ನೀಡಿದಂತೆ ಈ ಸ್ತೋತ್ರವನ್ನು ಪಠಣೆ ಮಾಡಿದವರಿಗೂ ಸಕಲ ಸೌಭಾಗ್ಯಗಳನ್ನು ಪ್ರದಾನ ಮಾಡುವಳು ಎಂದು ಹೇಳಲಾಗಿದೆ. ಲಕ್ಷೀ ದೇವಿಯ ಪ್ರಾದುರ್ಭಾವವನ್ನೂ ಕಲ್ಯಾಣವನ್ನು ವರ್ಣಿಸುವ ಈ ಕಥನದ ಪಠಣ ಶ್ರವಣಗಳು ಲಕ್ಷ್ಮೀಕಟಾಕ್ಷವನ್ನು ದೊರಕಿಸಿಕೊಡುತ್ತವೆ.

ಸಂಪತ್ತಿನ ಸುರಿಮಳೆಯನ್ನೇ ಸುರಿಸಿದ ಶ್ರೀಶಗುಣದರ್ಪಣ ಸ್ತೋತ್ರ

"ವಿಷ್ಣುನಾ ಸಹಿತಾ ಧ್ಯಾತಾ ಸಾಹಿ ತುಷ್ಟಿಂ ಪರಾಂವ್ರಜೇತ್" ವಿಷ್ಣುವಿನೊಡನೆ ಲಕ್ಷ್ಮೀದೇವಿಯ ಧ್ಯಾನವನ್ನು (ಪೂಜೆಯನ್ನು) ಮಾಡುವುದೇ ಅವಳು ಮೆಚ್ಚುವ ಉಪಾಸನೆಯ ದಾರಿ. ಅವನನ್ನು ಕೊಂಡಾಡಿದರೆ ದೇವಿಗೆ ಅತಿಪ್ರಿಯ. ಅವಳನ್ನು ಕೊಂಡಾಡಿದರೆ ಶ್ರೀಹರಿಗೆ ಮೆಚ್ಚುಗೆ. ಇಬ್ಬರನ್ನೂ ಒಟ್ಟಿಗೆ ಸ್ತುತಿಸಿದರೆ ಇಬ್ಬರಿಗೂ ಸಂತೋಷ. ಭಕ್ತರಿಗೆ ಇಬ್ಬರ ಅನುಗ್ರಹವೂ ಒಟ್ಟಿಗೆ ಲಭ್ಯ. ವಾದಿರಾಜರ ಶ್ರೀಶಗುಣದರ್ಪಣಸ್ತೋತ್ರ ಲಲನಾರತ್ನ ಎನಿಸಿದ ರಮಾದೇವಿಯನ್ನೂ ಪುರುಷೋತ್ತಮ ಎನಿಸಿದ ಶ್ರೀಹರಿಯನ್ನೂ ಒಟ್ಟಿಗೆ ಸ್ತುತಿಸುವ ಸ್ತೋತ್ರರತ್ನ. **"ಸುರಾರಾಧಿತ ಪಾದಾಬ್ಜಾ ರಮನಾರಾಯಣೌಸ್ತುಮಃ"** ಶ್ರೀ ಎಂದರೆ ಲಕ್ಷ್ಮೀದೇವಿ. ಶ್ರೀಶ ಎಂದರೆ ಅವಳಿಗೆ ಒಡೆಯನಾದ ಶ್ರೀಮನ್ನಾರಾಯಣ. ದರ್ಪಣ ಎಂದರೆ ಕನ್ನಡಿ. ಅವರಿಬ್ಬರ ಗುಣಗಣಗಳನ್ನು, ಮಹಿಮೆಗಳನ್ನು ಒಡನೊಡನೆ ಕೊಂಡಾಡುವುದರಿಂದ ಇದು

ಶ್ರೀಶಗುಣ ದರ್ಪಣ ಸ್ತೋತ್ರ ಎಂದು ಹೆಸರಾಗಿದೆ. ಲಕ್ಷ್ಮೀದೇವಿಯನ್ನು ಸ್ತುತಿಸುವ ಸಂಸ್ಕೃತ ಸ್ತೋತ್ರಗಳಲ್ಲಿ ಇದೊಂದು ಬಹು ಸುಂದರವೂ ಅರ್ಥಗರ್ಭಿತವೂ ಮಹಿಮಾನ್ವಿತವೂ ಆದ ಸ್ತೋತ್ರವಾಗಿದೆ.

ಈ ಕೃತಿರಚನೆಗೆ ಒಂದು ಐತಿಹಾಸಿಕ ಹಿನ್ನೆಲೆಯಿದೆ. ಅಚ್ಯುತರಾಯನೆಂಬ ಅರಸನು ವಿಜಯನಗರವನ್ನು ಆಳುತ್ತಿದ್ದ ಕಾಲ. ಪ್ರಕೃತಿ ವಿಕೋಪದಿಂದ ದೇಶವು ಬರಗಾಲದಿಂದ ಪೀಡಿತವಾಯಿತು. ದೇಶದ ಸಂಪತ್ತು ದಿನೇ ದಿನೇ ಕಡಿಮೆಯಾಗತೊಡಗಿತು. ರಾಜನೂ ಪ್ರಜೆಗಳೂ, ಬಹು ಕಷ್ಟಗಳಿಗೆ ಒಳಗಾದರು. ಕಂಗೆಟ್ಟ ರಾಜನು ವಾದಿರಾಜರನ್ನು ಶರಣುಹೊಂದಿ ಸಂಕಷ್ಟ ಗಳಿಂದ ಪಾರುಮಾಡಬೇಕೆಂದು ಬೇಡಿಕೊಳ್ಳಲು ಗುರುಗಳು ದಯಾರ್ದ್ರ ಹೃದಯರಾಗಿ, ಶ್ರೀಶಗುಣದರ್ಪಣ ಸ್ತೋತ್ರವನ್ನು ರಾಜನಿಗೆ ರಚಿಸಿಕೊಟ್ಟರು. ಇದನ್ನು ರಾಜನು ತಾನೂ ಪಠಣೆ ಮಾಡಿ ಸದ್‌ಬ್ರಾಹ್ಮಣರಿಂದ ನಿರಂತರವಾಗಿ ಪಾರಾಯಣ ಮಾಡಿಸಲು, ದೇಶದ ಬರಗಾಲವು ಪರಿಹಾರವಾಗಿ ರಾಜನು ಸಂಪತ್ತನ್ನು ಮರಳಿ ಪಡೆದು ರಾಜನೂ ಪ್ರಜೆಗಳೂ ಸುಖಿಯಾದರೆಂದು ಪ್ರತೀತಿ.

ಇನ್ನೊಂದು ಐತಿಹ್ಯದ ಪ್ರಕಾರ ಒಬ್ಬ ದಟ್ಟದರಿದ್ರ ಬ್ರಾಹ್ಮಣನು ಸಾಲ ಗಳಿಂದ ಬಹುವಾಗಿ ಪೀಡಿತನಾಗಿ, ಋಣ ಪರಿಹಾರವಾಗುವಂತೆ ಅನುಗ್ರಹಿಸ ಬೇಕೆಂದು ವಾದಿರಾಜರನ್ನು ಬಹು ಬಗೆಯಾಗಿ ಬೇಡಿಕೊಳ್ಳುತ್ತಿದ್ದನು. ಅವನ ಸಲುವಾಗಿ ಗುರುಗಳು ಈ ಸ್ತೋತ್ರದಿಂದ ಸಂಪದಭಿಮಾನಿಯಾದ ಮಹಾಲಕ್ಷ್ಮೀದೇವಿಯನ್ನು ಸ್ತುತಿಸಿದರು. ಅದರಿಂದ ಪ್ರಸನ್ನಳಾದ, ಸುಪ್ರೀತ ಳಾದ ದೇವಿ ಕನಕವೃಷ್ಟಿಯನ್ನೇ ಕರೆದಳು. ರಾಜರು ಅದನ್ನೆಲ್ಲ ಸ್ವೀಕರಿಸುವಂತೆ ಆ ಬ್ರಾಹ್ಮಣನಿಗೆ ಅಪ್ಪಣೆಕೊಟ್ಟರು. ಆ ದರಿದ್ರನು ಮಹಾ ಪ್ರಸಾದವೆಂದು ಪರಮಾನಂದದಿಂದ ಅದನ್ನು ತೆಗೆದುಕೊಂಡು ತನ್ನನ್ನು ಪೀಡಿಸುತ್ತಿದ್ದ ಸಾಲಗಳಿಂದ ಮುಕ್ತನಾದನು. ಅಂದಿನಿಂದ ಇಂದಿನವರೆಗೂ ಈ ಸ್ತೋತ್ರ ಸಂಪತ್‌ಪ್ರದಾಯಕವೆಂದು ಪ್ರಸಿದ್ಧವಾಗಿದ್ದು ಅಸಂಖ್ಯಾತ ಭಕ್ತರು ಇದನ್ನು ಪಠಿಸಿ ಪಾರಾಯಣ ಮಾಡಿ ಐಶ್ವರ್ಯ ಪಡೆದಿರುತ್ತಾರೆ.

ಶ್ರೀ ವಾದಿರಾಜಯತೀಂದ್ರ ರಚಿತವಾದ ಶ್ರೀಶಗುಣದರ್ಪಣ ಸ್ತೋತ್ರ ಅತ್ಯಂತ ಮಹಿಮಾನ್ವಿತವೂ ವಾದಿರಾಜರ ತಪಶಕ್ತಿ ಪೂರ್ಣವೂ ಆದುದು. ಈ ಸ್ತೋತ್ರವನ್ನು ಪಠಣೆ ಮಾಡುವವನು ಯಥೇಚ್ಛವಾಗಿ ಸಂಪತ್ತನ್ನು ಉಳ್ಳವನಾಗುತ್ತಾನೆ. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿಲ್ಲ ಎಂದು

ಫಲಶೃತಿಯಲ್ಲಿ ವಾದಿರಾಜರೇ ಹೇಳಿರುತ್ತಾರೆ. ಇದನ್ನು ಹಲವಾರು ರೀತಿಯಲ್ಲಿ ಪಠಿಸಬಹುದು. ಸಂಪುಟೀಕರಣಗೊಳಿಸಿ (ಮೊದಲು ಮತ್ತು ಕಡೆಯಲ್ಲಿ ವಿಷ್ಣು ಸ್ತೋತ್ರವನ್ನು ಮಧ್ಯದಲ್ಲಿ ಶ್ರೀಶಗುಣದರ್ಪಣ ಸ್ತೋತ್ರವನ್ನು ಪಠಿಸುವುದು) ಅವರವರ ಶಕ್ತ್ಯಾನುಸಾರ ದಶಸಹಸ್ರ, ಸಹಸ್ರ, ಅಷ್ಟೋತ್ತರ ಶತ ಸಂಖ್ಯೆಯಲ್ಲಿ ಆವೃತ್ತ ಕ್ರಮದಿಂದ ಜಪಿಸಿ ಯಥಾ ಯೊಗ್ಯತಾನುಸಾರ ಸಂಪತ್ತನ್ನು ಪಡೆದ ಭಕ್ತರ ಹಲವಾರು ದೃಷ್ಟಾಂತಗಳಿವೆ. ಅದು ಸಾಧ್ಯವಿಲ್ಲ ದಿದ್ದಾಗ ನಿತ್ಯವೂ ದೇವಪೂಜಾನಂತರ ಪಠಿಸಬಹುದು. ದೇವೀ ಪೂಜೆಗೆ ವಿಹಿತವಾದ ಶರನ್ನವರಾತ್ರಿಯಲ್ಲಿ ಏಕೋತ್ತರವಾರವ್ಯಧ್ಯಾ ಎಂದರೆ ಪಾಡ್ಯದ ದಿನ ಒಂದು ಬಾರಿ, ಬಿದಿಗೆಯ ದಿನ ಎರಡು ಬಾರಿ, ತದಿಗೆ ಮೂರುಬಾರಿ ಹೀಗೆ ದಿನಕ್ಕೆ ಒಂದು ಸಂಖ್ಯೆಯಂತೆ ಹೆಚ್ಚಿಸುತ್ತಾ ಪಠಿಸುವುದು ವಿಶೇಷ ಫಲಕಾರಿಯಾಗಿದೆ. ಶ್ರೀಶಗುಣ ದರ್ಪಣ ಸ್ತೋತ್ರದ ಪಠಣೆ ಶ್ರೀಕರ, ಶುಭಕರ ಶ್ರೇಯಸ್ಕರ, ಸರ್ವ ಸಂಪತ್ಕರ.

ವಿಜಯದಾಸರಿಗೆ ದೇವಿ ಉಣಿಸಿದ ಅಮೃತಾನ್ನ

ಶ್ರೀದೇವಿ ಜಗತ್ತಿಗೆ ಅನ್ನ ನೀಡುವ ಮಮತಾಮಯಿ ತಾಯಿ. ಅವಳಿತ್ತ ಊಟ ಜೀವಿಗಳ ಜನುಮ ಜನುಮದ ಹಸಿವನ್ನು ಹಿಂಗಿಸುವ ಅಮೃತಾನ್ನ, ಮಿಗಿಲಾಗಿ ಅವಳ ಪತಿಯ ಪ್ರಸಾದ. ಸಿರಿದೇವಿಯ ಕೃಪೆಯೆಂಬ ಕೈತುತ್ತೇ ಇನಿತು ಸವಿ. ಹೀಗಿರುವಾಗ ನಿಜವಾಗಿಯೂ ಅವಳು ಬಡಿಸಿದ ಭೋಜನ ವನ್ನು ಭಗವಂತನ ಪ್ರಸಾದವನ್ನು ಉಂಡವರ ಸೌಭಾಗ್ಯಕ್ಕೆ ಸರಿಮಿಗಿಲುಂಟೆ! ಹರಿದಾಸವರೇಣ್ಯರಾದ ವಿಜಯದಾಸರು ಇಂತಹ ಭಾಗ್ಯಶಾಲಿಗಳು. ರಾಯಚೂರು ಜಿಲ್ಲೆಯಲ್ಲಿ ಚೀಕಲಪರವಿ ಎಂಬ ಗ್ರಾಮ ಮಂಗಳ ತರಂಗಿಣಿ ಯಾದ ತುಂಗಭದ್ರಾನದಿಯ ತೀರದಲ್ಲಿದೆ. ಮಹಾ ಮಹಿಮರಾದ ಶ್ರೀ ಪಾದರಾಯರು ಸಂಚಾರತ್ವೇನ ಇಲ್ಲಿಗೆ ಬಂದಾಗ ತುಂಗಾತಟದ ಮೇಲ್ಭಾಗದಲ್ಲಿ ಗ್ರಾಮಕ್ಕೆ ಹತ್ತಿರವಾಗಿಯೇ ಒಂದು ಅಶ್ವತ್ಥವೃಕ್ಷವನ್ನು ನೆಟ್ಟು ವಿಶಾಲವಾದ ಕಟ್ಟೆಯನ್ನು ಕಟ್ಟಿಸಿ ಅಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರನ್ನು ಪ್ರತಿಷ್ಠಾಪಿಸಿದರು. ಅಂದಿನಿಂದ ಈ ಪುಣ್ಯಕ್ಷೇತ್ರ ಅಶ್ವತ್ಥನರಸಿಂಹಸ್ವಾಮಿ ಸನ್ನಿಧಾನವೆಂದು ಬಹು ಜಾಗೃತ ಸ್ಥಳವೆಂದು ಪ್ರಸಿದ್ಧವಾಯಿತು. ಲಕ್ಷ್ಮೀ ನರಸಿಂಹನಂತೂ ವರಗಳ ಮಳೆಯನ್ನೇ ಕರೆಯುವ ವರಪ್ರಸಾದಿ ಎನಿಸಿದ. ಈ ಗ್ರಾಮದಲ್ಲಿ ವಾಸಿಸುತ್ತಿದ್ದ ಶ್ರೀನಿವಾಸಪ್ಪ ಕೂಸಮ್ಮನೆಂಬ ದಂಪತಿಗಳು

ಅಶ್ವತ್ಥ ನರಸಿಂಹ ದೇವರ ಸೇವೆಯನ್ನು ಶ್ರದ್ಧಾಭಕ್ತಿಗಳಿಂದ ಮಾಡಿ ದಾಸಪ್ಪನೆಂಬ ಮಗನನ್ನು ಪಡೆದರು. ಇವರೇ ಮುಂದೆ ವಿಜಯದಾಸರೆಂದು ಪ್ರಖ್ಯಾತರಾದವರು. ಇವರಿಗೊಲಿದ ಶ್ರೀಮನ್ನಾರಾಯಣನೂ, ಲಕ್ಷ್ಮೀದೇವಿಯೂ ಇವರಿಗೆ ಅನೇಕ ಮಹಿಮೆಗಳನ್ನು, ಲೀಲೆಗಳನ್ನು ತೋರಿ ಇವರ ಜೀವನ ಪವಾಡ ಸದೃಶವಾಯಿತು.

ಆಗಾಗ್ಗೆ ದೇಶಸಂಚಾರ ಕೈಗೊಳ್ಳುತ್ತಿದ್ದ ವಿಜಯದಾಸರು ಒಮ್ಮೆ ಕೆಲ ಕಾಲ ಚೀಕಲಪರವಿಯಲ್ಲಿ ತಪಸ್ಸಿನಲ್ಲಿ ತೊಡಗಿದರು. ಬೆಳಿಗ್ಗೆ ತಪೋವನಕ್ಕೆ ಹೋದರೆ ಮಧ್ಯಾಹ್ನ ಊಟದ ಸಮಯಕ್ಕೆ ಮನೆಗೆ ಬರುತ್ತಿದ್ದರು. ಅಂಥದೊಂದು ದಿನ ದಾಸರು ತಪಸ್ಸಿಗೆ ಹೋಗಿದ್ದಾರೆ. ಮನೆಯಲ್ಲಿ ಯಾರೂ ಇಲ್ಲ. ದಾಸರ ವೃದ್ಧತಾಯಿ ಕೂಸಮ್ಮ ದಾಸರು ಬರುವುದನ್ನೇ ಎದುರು ನೋಡುತ್ತಾ ನಡುಮನೆಯಲ್ಲಿ ಕುಳಿತಿದ್ದಾರೆ. ಎಲ್ಲೆಲ್ಲೂ ಶಾಂತವಾಗಿದೆ. ಇದ್ದಕ್ಕಿದ್ದಂತೆ ಯಾರೋ ಬರುತ್ತಿರುವಂತೆ ಪೈಜಣ ಕಾಲ್ಗೆಜ್ಜೆಗಳ ಮಧುರಧ್ವನಿ ಕೇಳತೊಡಗಿತು. ಕೂಸಮ್ಮ ಆಶ್ಚರ್ಯದಿಂದ ನೋಡುತ್ತಿದ್ದರೆ ಸರ್ವಾಭರಣ ಭೂಷಿತೆಯಾಗಿ, ಜರತಾರಿ ಪೀತಾಂಬರವುಟ್ಟಿದ್ಧ ಅನುಪಮ ಸುಂದರಿಯೂ, ನವಯೌವನವತಿಯೂ ಆದ ಮುತ್ತೈದೆಯೊಬ್ಬಳು ಕಾಲ್ಗೆಜ್ಜೆ ಶಬ್ದ ಮಾಡುತ್ತಾ ಮನೆಯೊಳಗೆ ಬರುತ್ತಿದ್ದಾಳೆ. ಅವಳು ಮನೆಯೊಳಗೆ ಕಾಲಿಟ್ಟೊಡನೆಯೇ ಮನೆಯೆಲ್ಲ ಬೆಳಕಾದಂತಾಯಿತು. ಏನೋ ಒಂದು ದೈವಿಕ ವಾತಾವರಣ ತುಂಬಿದಂತಾಯಿತು. ಕೂಸಮ್ಮ ಅಂತಹ ದಿವ್ಯ ಕಳೆಯಿಂದ ಶೋಭಿಸುವ ಮುತ್ತೈದೆಯನ್ನು ಎಂದೂ ಕಂಡಿರಲೇ ಇಲ್ಲ. ಬಂದವಳ ಕೈಲಿ ದೊಡ್ಡದಾದ ಬೆಳ್ಳಿಯ ತಟ್ಟೆ ತಂಬಿಗೆ, ಅದರ ತುಂಬ ನಾನಾ ವಿಧವಾದ ಭೋಜನ ಪದಾರ್ಥಗಳು, ಎಡಗೈಯಲ್ಲಿ ಬೆಳ್ಳಿ ತಂಬಿಗೆ. ಅದರ ತುಂಬ ಕೇಸರಿ ಬೆರೆತ ನೀರು. ಪದಾರ್ಥಗಳ ಸುವಾಸನೆ ಮನೆ ತುಂಬ ತುಂಬಿಕೊಂಡಿತ್ತು ಬಂದವಳು ಅಮ್ಮಾ ಎಂದು ಕರೆದಳು. ವೀಣೆ ಧ್ವನಿಮಾಡಿದಂತಾಯಿತು. ಕೂಸಮ್ಮನಿಗೆ ಆಧ್ವನಿಯನ್ನು ಕೇಳಿ ಮೈ ರೋಮಾಂಚನಗೊಂಡಿತು. ಕೂಸಮ್ಮ **'ನೀನಾರಮ್ಮಾ'** ಎಂದು ಕೇಳಿದಳು, ಅದಕ್ಕೆ ಆ ಮುತ್ತೈದೆ "ನನ್ನ ಹೆಸರು **ಲಕ್ಷ್ಮಕ್ಕ**." ನಮ್ಮ ಯಜಮಾನರು ನಾರಾಯಣರಾಯರು. ದಾಸರ ಮಿತ್ರರು ಇಂದು ದಾಸರಿಗೆ ಊಟಕ್ಕೆ ಹೇಳಿದ್ದರಂತೆ. ಹೊತ್ತಾಯಿತು. ದಾಸರು ಇನ್ನೂ ಬರಲಿಲ್ಲ. ನಮ್ಮ ರಾಯರು ಹಾದಿ ಕಾದು ಬೇಸತ್ತು ದಾಸರ ಮನೆಗೆ ಅಶ್ವತ್ಥ ನರಸಿಂಹದೇವರ ಪ್ರಸಾದ ಕೊಟ್ಟು ಬಾ ಎಂದರು. ಅದಕ್ಕೆ ತಂದಿದ್ದೇನೆ.

ಎಂದು ನೈವೇದ್ಯ ಸಹಿತವಾದ ಬೆಳ್ಳಿಯ ತಟ್ಟೆ ತಂಬಿಗೆಗಳನ್ನು ದೇವರ ಮನೆಯ ಮುಂದಿಟ್ಟು ಹೋಗಿ ಬರುತ್ತೇನಮ್ಮಾ ಎಂದು ಹೊರಟಳು. ಕೂಸಮ್ಮ ಕುಂಕುಮ ಹಚ್ಚಿಕೋ ತಾಯಿ ಎಂದು ಕುಂಕುಮದ ಕರಡಿಗೆ ನೀಡಿದಳು. ಕುಂಕುಮ ಹಚ್ಚಿಕೊಂಡು ಆ ಮುತ್ತೈದೆ ಕಾಲ್ಗೆಜ್ಜೆಗಳ ಮಂಜುಳ ನಾದ ಮಾಡುತ್ತಾ ಹೊರಟು ಹೋದಳು ಮನೆಯಲ್ಲಾ ಒಮ್ಮೆಗೆ ಕತ್ತಲಾದಂತಾಯಿತು. ಕೂಸಮ್ಮನಿಗೆ ಬಹು ಆಶ್ಚರ್ಯ. ತಕ್ಷಣ ಹೊರಬಂದು ಸುತ್ತಮುತ್ತ ನೋಡುತ್ತಾಳೆ. ಆ ಮುತ್ತೈದೆ ಇರಲಿ, ಬೀದಿಯಲ್ಲಿ ಯಾರ ಸುಳಿವೂ ಇಲ್ಲ. ಒಳಗೆ ಬಂದರೆ ಮನೆ ತುಂಬಾ ಆ ಪದಾರ್ಥಗಳ ಪರಿಮಳ ವ್ಯಾಪಿಸಿದೆ. ಅಂಥ ಸುವಾಸನೆ ಅವಳೆಂದೂ ಕಂಡಿದ್ಧೆ ಇಲ್ಲ. ಇದೇನೋ ದೈವಮಾಯ ಎಂದು ಯೋಚಿಸುತ್ತಾ ಕುಳಿತಿರಲು ವಿಜಯದಾಸರು ಬಂದರು. ಬಂದವರೇ ಇದೇನಮ್ಮಾ ಇಂಥ ದಿವ್ಯ ಪರಿಮಳ ಎಂದು ಕೇಳಲು, ಕೂಸಮ್ಮ ನಡೆದ ಘಟನೆಯೆಲ್ಲಾ ಹೇಳಿದಳು. ದಾಸರು ತಕ್ಷಣವೇ ಅಶ್ವತ್ಥಕಟ್ಟೆಗೆ ಹೋಗಿ ನೋಡಲು ಅಲ್ಲಿ ಯಾರೂ ಕಾಣಿಸಲಿಲ್ಲ. ಇದೇನೋ ದೈವಲೀಲೆಯೆಂದು, ಭಗವಂತನೇ ಅನುಗ್ರಹಿಸಿದ ದಿವ್ಯ ಭೋಜನವೆಂದು ಅದನ್ನು ಊಟಮಾಡಿದರಂತೆ. ಒಂದೊಂದು ಪದಾರ್ಥದ ರುಚಿಯೂ ಅದ್ಭುತವಾಗಿತ್ತು. ಊಟ ಅಮೃತಸಮಾನವಾಗಿತ್ತು. ವಿಜಯದಾಸರಿಗೆ ತಮ್ಮ ಮನೆಗೆ ಬಂದುದು ಕ್ಷೀರಸಾಗರ ಕನ್ನಿಕೆ ಸಾಕ್ಷಾತ್ ಲಕ್ಷ್ಮೀ ದೇವಿಯೇ ಎಂದೂ ಭೋಜನ ಶ್ರೀ ಹರಿ ಕೃಪೆ ತೋರಿಕಳುಹಿಸಿದ ಪ್ರಸಾದವೆಂದು ಅರಿವಾಗಿ, ತಾವೆಂತ ಅದೃಷ್ಟ ಶಾಲಿಗಳೆಂದು ಭಗವಂತನನ್ನೂ ಜಗನ್ಮಾತೆಯನ್ನೂ ಕೊಂಡಾಡಿ ದಣಿಯದಾದರು. ಕೂಸಮ್ಮ ಭಾಗ್ಯ ದೇವತೆಯ ದರ್ಶನ ಪಡೆದು, ಅವಳಿಗೆ ಕುಂಕುಮ ನೀಡಿದ ತನ್ನ ಸೌಭಾಗ್ಯಕ್ಕೆ ಹಿರಿಹಿರಿ ಹಿಗ್ಗಿ ತನಗೆ ಸುಮಂಗಲ್ಯ ಸ್ಥಿರವೆಂದು ತಿಳಿದು ಆನಂದ ಭರಿತಳಾದಳು. ದೇವಿಯ ಕೈ ಭೋಜನವನ್ನುಂಡ ದಾಸರಿಗೆ ಅವರಿರುವವರೆಗೂ ದಾರಿದ್ರ್ಯ ಕಾಡಲೇ ಇಲ್ಲ. ದೇವಿ ಕೃಪೆಯಿಂದ ಸರ್ವಸಂಪತ್ತುಗಳೂ ಒಲಿದು ಬಂದು ತುಂಬು ಬಾಳನ್ನು ಬಾಳಿದರು. "**ಪಾಲಿಸೆ ಪದುಮಾಲಯೆ ನೀನೆ ಗತಿ" ಕಾಯೆ ಕರುಣಾಂಬುಧಿಯೆ ಇಂದಿರಾದೇವಿ" ಜಗಪತಿಯೆ ತೋರಮ್ಮ ಎನಗೆ ಕರುಣವ ಮಾಡಮ್ಮ' "ಶ್ರೀಮಹಾಲಕುಮಿದೇವಿಯೆ ಕೋಮಲಾಂಗಿಯೆ" ಕ್ಷೀರವಾರಿಧಿ ಕನ್ನಿಕೆ ಮಾರಜನಿಕೆ** ಮುಂತಾದ ಹಲವಾರು ಚಂದದ ಹಾಡುಗಳನ್ನು ರಚಿಸಿ ದೇವಿಯ ಅಡಿದಾವರೆಗಳಿಗೆ ಅರ್ಪಿಸಿ ಧನ್ಯರಾದರು.

ಸರ್ವ ಶುಭಕರ ಲಕ್ಷ್ಮೀ ಶೋಭಾನೆ

ಶೋಭನವೆನ್ನಿರೆ ಸುರರೊಳು ಸುಭಗನಿಗೆ
ಶೋಭನವೆನ್ನಿ ಸುಗುಣನಿಗೆ
ಶೋಭನವೆನ್ನಿರೆ ತ್ರಿವಿಕ್ರಮರಾಯಗೆ
ಶೋಭನವೆನ್ನಿ ಸುರಪ್ರಿಯಗೆ "ಶೋಭಾನೆ"
ಒಂದು ಕೈಯಿಂದ ಅಭಯವನೀವಳೆ
ಮತ್ತೊಂದು ಕೈಯಿಂದ ವರಗಳ
ಕುಂದಿಲ್ಲದಾನಂದ ಸಂದೋಹ ಉಣಿಸುವ
ಇಂದಿರೆ ನಮ್ಮ ಸಲಹಲಿ ॥ಶೋಭಾನೆ॥

ಮಂಗಳಗಳಿಗೆ ಮಂಗಳ ಗೀತೆಯಂತಿರುವುದು, ರಮಾನಾರಾಯಣರಿಗೆ ಅತಿಪ್ರಿಯವಾದುದು, ವಾದಿರಾಜರಿಂದ ರಚಿತವಾದ ಲಕ್ಷ್ಮೀ ಶೋಭಾನೆ ಶುಭಗಳ ಮಳೆ ಸುರಿಸುವ ಶೋಭಾನೆ. ಒಮ್ಮೆ ಸ್ವಾದಿಯಲ್ಲಿ ವಿರಾಜಮಾನ ನಾಗಿರುವ ತ್ರಿವಿಕ್ರಮಸ್ವಾಮಿಯು ವಾದಿರಾಜರಿಗೆ ನನ್ನ ಕಲ್ಯಾಣದ ಹಾಡು ರಚಿಸು ಎಂದು ಆಜ್ಞಾಪಿಸಿದನಂತೆ. ಶ್ರೀಗಳವರು ತಕ್ಷಣವೇ ಪ್ರಾರಂಭಿಸಿದರು. **"ಶೋಭನವೆನ್ನಿ ಸುರರೊಳು ಸುಭಗನಿಗೆ ಶೋಭನವೆನ್ನಿ ತ್ರಿವಿಕ್ರಮರಾಯನಿಗೆ** ಎಂದು ಮುಗಿಸಿದರು. ತಮ್ಮ ಹಯವದನ ಅಂಕಿತದೊಡನೆ 112 ನುಡಿಗಳ ಈ ಕಲ್ಯಾಣ ಕಥನವನ್ನು ಸ್ವಾಮಿಗೆ ಅರ್ಪಿಸಿ ಆನಂದಿಸಿದರು. ಅಂದಿನಿಂದ ಇಂದಿನವರೆಗೂ ಈ ಕೃತಿಯ ಮಹಿಮೆಗೆ, ಅದರ ಪಠಣೆ ತೋರಿರುವ ಪವಾಡಗಳಿಗೆ ಎಣೆಯಿಲ್ಲ. ಎಣಿಕೆಯಿಲ್ಲ. ಶೋಭಾನೆ ರಚಿಸಿದ ತರುಣದಲ್ಲೇ ತನ್ನ ಪ್ರಭಾವ ತೋರಿತು. ಸ್ವಾದಿಯ ಅರಸನಾಗಿದ್ದ ಅರಸಪ್ಪನಾಯಕನ ಮಗಳ ವಿವಾಹ ಮಹೋತ್ಸವ ಎಲ್ಲೆಲ್ಲೂ ಸಂಭ್ರಮ, ಸಡಗರ ತುಂಬಿ ತುಳುಕಾಡುತ್ತಿದೆ. ಇದ್ದಕ್ಕಿದ್ಧಂತೆಯೇ ಹಾಹಾಕಾರ. ಹಸೆಮಣೆಯ ಮೇಲೆ ಮದುಮಗನ ಮರಣ. ಮದುಮಗ ತಲೆಗೆ ಧರಿಸಿದ್ಧ ಪೇಟಾದಲ್ಲಿ ಸಣ್ಣ ಹಾವೊಂದು ಸೇರಿಕೊಂಡಿದ್ದು ಅದು ಕಚ್ಚಿ ಮದುಮಗನು ಹಸೆಮಣೆಯ ಮೇಲೆ ಮೃತನಾದನು. ಮಂಗಳದ ಮನೆ ಗೋಳಿನ ಆಗರವಾಯಿತು. ನವವಧು ರಾಜಕುಮಾರಿಯು ಸಹಗಮನಕ್ಕೆ ಉದ್ಯುಕ್ತಳಾದಳು. ದುಃಖ ತಪ್ತನಾದ ಅರಸಪ್ಪನಾಯಕನು ದಿಕ್ಕುಗಾಣದ ವಾದಿರಾಜರೇ ತನ್ನನ್ನು ರಕ್ಷಿಸಬಲ್ಲವರೆಂದು, ಗುರುಗಳಲ್ಲಿಗೆ ಬಂದು ಶರಣಾಗಿ, ತನ್ನ ಮಗಳಿಗೆ

ಮಾಂಗಲ್ಯಭಾಗ್ಯ ನೀಡುವಂತೆ ತನ್ನ ಅಳಿಯನನ್ನು ಬದುಕಿಸಿಕೊಡುವಂತೆ ಪ್ರಾರ್ಥಿಸಿದನು. ವಾದಿರಾಜರು ಶಿಷ್ಯನ ಮೇಲಿನ ಕರುಣೆಯಿಂದ, ತಾವೇ ರಚಿಸಿದ ಲಕ್ಷ್ಮೀಶೋಭಾನೆಯನ್ನು ತಾವೂ ಹಾಡಿ, ಸುಮಂಗಲಿಯರಿಂದ ಸಾಮೂಹಿಕವಾಗಿ ಹಾಡಿಸಲು, ಅದರ ಪ್ರಭಾವದಿಂದಾಗಿ ಮದುಮಗನು ನಿದ್ಧೆಯಿಂದೆದ್ದವನಂತೆ ಮೇಲೆದ್ದು ಕಣ್ತೆರೆದ. ಮತ್ತೆ ಮದುವೆಯ ಮನೆಯಲ್ಲಿ ಮಂಗಳದ ಧ್ವನಿ, ಸಡಗರ ಸಂತೋಷಗಳು. ಅರಸಪ್ಪ ನಾಯಕನೂ, ನೂತನ ವಧೂವರರೂ ವಾದಿರಾಜ ಗುರುರಾಜರಿಗೆ ಪ್ರಣಾಮಗಳನ್ನೂ ಕೃತಜ್ಞತೆ ಗಳನ್ನೂ ಅರ್ಪಿಸಿದರು. ಅಂದಿನಿಂದಲೇ ಪ್ರಾರಂಭವಾಯಿತು, ಮದುವೆಯ ಮನೆಗಳಲ್ಲಿ ಈ ಪದ ಪಠಣೆ. ವಾದಿರಾಜರೇ ಹೇಳಿದ್ದಾರೆ "**ಮದುವೆಯ ಮನೆಯಲ್ಲಿ ಈ ಪದವ ಪಾಡಿದರೆ ಮದುಮಕ್ಕಳಿಗೆ ಮುದವಹುದು, ವಧುಗಳಿಗೆ ಓಲೆ ಭಾಗ್ಯ ಹೆಚ್ಚುವುದು ದಿನದಿನಕ್ಕೆ ಮದನನಯ್ಯನ ಕೃಪೆಯಿಂದ ಶೋಭಾನೆ**" ಎಂದು. ಅದೆಷ್ಟು ಮಂದಿ ಹೆಚ್ಚು ಆಯುಸ್ಸು ಪಡೆದರೋ ಪಡೆಯುತ್ತಿದ್ದಾರೋ ಅವರ ಅನುಗ್ರಹದಿಂದ ಬಂದ ಮಂತ್ರ ಸಿದ್ಧಿಯಿಂದ ಕೂಡಿದ ಈ ಪದ ಪಠನದಿಂದ. ವಾದಿರಾಜರು ಈ ಹಾಡಿನ ಪಠಣೆಯಿಂದ ತಮ್ಮ ಪೂರ್ವಾ ಶ್ರಮದ ತಂಗಿಯ ಗಂಡನನ್ನೇ ಬದುಕಿಸಿಕೊಟ್ಟರೆಂದು ಪ್ರತೀತಿಯಿದೆ.

ಮದುವೆಯ ಮನೆಗಳಲ್ಲಿ ಲಕ್ಷ್ಮೀ ಶೋಭಾನೆಯ ಸಾಮೂಹಿಕ ಗಾನ ಈಗ ಎಲ್ಲೆಲ್ಲೂ ಪ್ರಚಲಿತವಿದೆ. ವಧೂವರರಿಗೆ ಮಂಗಳವನ್ನು ಹಾರೈಸುವ. ಶುಭ ವನ್ನು ಕೋರುವ, ಆಶೀರ್ವಾದ ಮಾಡುವ ದಿವ್ಯ ಕಥನವಿದು. ಸೌಮಂಗಲ್ಯ ಚಿರಸ್ಥಾಯಿಯಾಗಲು ಈ ಪದ ವರಪ್ರದ. ಲಕ್ಷ್ಮೀ ಶೋಭಾನೆ ಸಂಪ್ರದಾಯಸ್ಥ ಕುಟುಂಬಗಳಲ್ಲಿ ನಿತ್ಯ ಪಾರಾಯಣದ ಸ್ತೋತ್ರವಾಗಿದೆ. ಸಂಧ್ಯಾಸಮಯದಲ್ಲಿ ಮನೆ ದೀಪಬೆಳಗಿ ತುಳಸಿಗೆ ದೀಪ ಹಚ್ಚಿ ಕುಂಕುಮವಿಟ್ಟು ಲಕ್ಷ್ಮೀ ಶೋಭಾನೆ ಹೇಳಿಕೊಳ್ಳುವ ಗೃಹಿಣಿಯರು ಅದೆಷ್ಟೋ ಮಂದಿ.ಇದನ್ನು 1008–108 ಬಾರಿ ಹಾಡಿ ದೇವಿಯ ಪದತಲದಲ್ಲಿ ಅರ್ಪಿಸಬಹುದು. ಲಕ್ಷ ಲಕ್ಷ್ಮೀ ಶೋಭಾನೆ ಪಠಣೆ ಈಗ ಎಲ್ಲೆಲ್ಲೂ ಪ್ರಚಲಿತವಿದೆ. ಇಂತಹ ಸಾಮೂಹಿಕ ಪಠಣೆಗಳಲ್ಲೂ ಯಥಾಶಕ್ತಿ ಭಾಗವಹಿಸಬಹುದು. 112 ನುಡಿಗಳಿರುವ ಲಕ್ಷ್ಮೀ ಶೋಭಾನೆ ಯನ್ನು 1,000 ಬಾರಿ ಪಠಿಸಿದರೆ ಲಕ್ಷ ಶ್ಲೋಕ ಪಠಿಸಿದಂತಾಗುತ್ತದೆ.

ಮದುವೆಯಾಗದ ಕನ್ಯೆಯರು ನಿತ್ಯವು ಶೋಭಾನೆ ಪಠಿಸಿದರೆ ಅವರ ಮನದಿಚ್ಛೆಗೆ ತಕ್ಕಂತೆ ಪತಿಗಳು ದೊರೆಯುವರೆನ್ನುವರು. ಇದು ನನ್ನ ಸ್ವಂತ ಅನುಭವ. ದಿನವೂ ಈ ಪದ ಪಾರಾಯಣದಿಂದ ನನ್ನ ಮೂವರು ಹೆಣ್ಣು

ಮಕ್ಕಳಿಗೂ ಉತ್ತಮ ಪತಿಗಳು ದೊರಕಿರುವರು. ಅಲ್ಲದೆ ನನ್ನ ಪತಿ ಬದರೀನಾಥ್ ಅವರಿಗೆ ಹೃದಯಾಘಾತ ಉಂಟಾದಾಗ, ಅವರ ಸನಿಹದಲ್ಲಿ ಕುಳಿತು ನಿತ್ಯವೂ ಈ ಪದವನ್ನು ನಾನು ಪಾರಾಯಣ ಮಾಡಿದ್ದರಿಂದ ಅವರೀಗ ಪೂರ್ಣ ಆರೋಗ್ಯವಂತರಾಗಿ ನಾವು ಸುಖವಾಗಿ ಬಾಳುತ್ತಿದ್ದೇವೆ. ಹೆಂಗಳೆಯರು ಮನಸಾರೆ ಬಯಸುವ, ಬೇಡುವ ಲಕ್ಷ್ಮೀದೇವಿಯ ಅನುಗ್ರಹದ ಸೌಭಾಗ್ಯ ಈ ಪದಕ್ಕಿದೆ. ಇದರ ಪಾರಾಯಣದಿಂದ ಮನೆಯಲ್ಲಿ ಲಕ್ಷ್ಮೀನಾರಾಯಣರ ಸನ್ನಿಧಾನ ಉಂಟಾಗುವುದೆಂದು, ಸುಖ ಸೌಭಾಗ್ಯಗಳು ಸಮೃದ್ಧಿಗೊಳ್ಳುವುದೆಂದು, ಆಯುಷ್ಯ ಭವಿಷ್ಯ ದಿನದಿನಕ್ಕೆ ಹೆಚ್ಚಿಸುವುದು ನಿರಾಯಸದಿಂದ ಸುಖಿಪರು ಎಂದು ಫಲಶೃತಿಯಲ್ಲಿ ಹೇಳಿರುತ್ತಾರೆ. ಸರ್ವ ಶುಭಕರ ಹಾಡು ಈ ಲಕ್ಷ್ಮೀ ಶೋಭಾನೆ ಪದ.

ಜಗನ್ಮಾತೆ ರುಕ್ಮಿಣಿದೇವಿ ಜಗನ್ನಾಥದಾಸರಿಗೆ ಔತಣ ಮಾಡಿದ ಕಥೆ.

ಜಗನ್ನಾಥ ವಿಠಲನು ಜಗನ್ಮಾತೆ ರುಕ್ಮಿಣಿಯು
ಜಗನ್ನಾಥದಾಸರಿಗೆ ಔತಣ ಮಾಡಿದ್ದು
ಜಗತ್ತಿನಲ್ಲಿ ಭಕ್ತರೆಲ್ಲ ಪೇಳ್ತಿಹರು
ಜಗದೀಶ ಫಂಡರೀಶ ವಿಠಲನಾ ಮಹಿಮೆ॥

ಹರಿಮಹಿಮೆಯನ್ನು ಸಾರುವ ಹರಿಕಥಾಮೃತಸಾರವೆಂಬ ಹರಿದಾಸ ಸಾಹಿತ್ಯದ ಮೇರುಕೃತಿಯನ್ನು ರಚಿಸಿದ ಜಗನ್ನಾಥದಾಸರ ಹೆಸರನ್ನು ಕೇಳದವರಾರು. ಅವರ ಬಾಳ ಸಾಗರದ ತುಂಬ ಹರಿಸಿರಿದೇವಿಯರ ಕರುಣೆ ಮಿಂಚಿನಂತೆ ಬೆಳಕು ಚಲ್ಲಿ ಸುಳಿದಾಡಿದೆ. ಫಂಡರಾಪುರದ ಪಾಂಡುರಂಗನ ರುಕುಮಾಯಿಯ ಮಹಾಭಕ್ತರು. ಅವರ ಧೃಡಭಕ್ತಿಗೊಲಿದು ಪಾಂಡುರಂಗ ರುಕ್ಮಿಣಿಯು ತಮ್ಮಲ್ಲಿಗೆ ಬಂದಿದ್ದ ಜಗನ್ನಾಥದಾಸರಿಗೆ ಮೃಷ್ಟಾನ್ನ ಭೋಜನದ ಔತಣ ಮಾಡಿ ಕಳಿಸಿಕೊಟ್ಟರು. ಅದೊಂದು ಅದ್ಭುತ ರಮ್ಯ ಕಥೆ.

ತಮ್ಮ ಗುರುಗಳಾದ ಗೋಪಾಲದಾಸರ ಆಣತಿಯಂತೆ ಫಂಡಾರಾಪುರಕ್ಕೆ ಪಾದಯಾತ್ರೆ ಮಾಡಿದ ಶ್ರೀನಿವಾಸಾಚಾರ್ಯರು (ಭಾವೀ ಜಗನ್ನಾಥ ದಾಸರು) ಪಾಂಡುರಂಗನ ಕೃಪೆಯೇ ಜಲರೂಪವನ್ನು ತಾಳಿದಂತೆ ಹರಿಯುತ್ತಿದ್ದ ಚಂದ್ರಭಾಗಾನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಅವರಿಗೆ ಜಗನ್ನಾಥವಿಠಲ ಎಂದು ಬರೆದಿದ್ದ ಶಿಲೆ ದೊರಕಿ ಅವರು ಅಂದಿನಿಂದ

ಜಗನ್ನಾಥದಾಸರೆನಿಸಿದರು. ದಿನದಿನವೂ ಪಾಂಡುರಂಗ ರುಕುಮಾಯಿಯರ ದಿವ್ಯ ಮಂಗಳ ವಿಗ್ರಹಗಳನ್ನು ದರ್ಶನ ಮಾಡುತ್ತ, ಪ್ರದಕ್ಷಿಣೆ ನಮಸ್ಕಾರ ಗಳನ್ನು ಅರ್ಪಿಸುತ್ತಾ ತಾವು ಸಂಕಲ್ಪಿಸಿದ್ಧಂತೆ ಹನ್ನೆರಡು ದಿನಗಳನ್ನು ಕಳೆದರು. ಹನ್ನೆರಡನೆಯ ದಿನ ಎಂದಿನಂತೆ ಪ್ರಾತಃ ಕಾಲ ದಾಸರು ದೇವಾಲಯಕ್ಕೆ ಬಂದು ದರ್ಶನಮಾಡಿ ನಾಮ ಸಂಕೀರ್ತನೆ ಮಾಡುತ್ತಾ ಪ್ರದಕ್ಷಿಣೆ ಮಾಡುತ್ತಿರಲು, ತೇಜಸ್ವಿಯೂ ಅಲಂಕಾರಭೂಷಿತನೂ ಆದ ಯಾತ್ರಿಕ ಬ್ರಾಹ್ಮಣನೊಬ್ಬನು ದಾಸರ ಬಳಿ ಬಂದು ದಾಸರೇ ತಾವು ಇಂದು ನಮ್ಮಲ್ಲಿಗೆ ಭೋಜನಕ್ಕೆ ಬರಬೇಕು ಎಂದು ಆಮಂತ್ರಿಸಿದನು. ತಾವು ಯಾರು ಎಂದು ದಾಸರು ಪ್ರಶ್ನಿಸಲು, ನಾನೊಬ್ಬ ಯಾತ್ರಿಕ, ನಮ್ಮದು ವೈಕುಂಠಪುರ ಅಗ್ರಹಾರ, ರುಕ್ಮಿಣಿ ದೇವಾಲಯದಲ್ಲಿ ಇದ್ದೇನೆ. ಸತ್ಪಾತ್ರರೆಂದು ತಮ್ಮನ್ನು ಕರೆದಿದ್ದೇನೆ. ಭೋಜನದ ವೇಳೆಗೆ ಸುಮಾರು 1 ಘಂಟೆಗೆ ಸರಿಯಾಗಿ ರುಕ್ಮಿಣಿ ದೇವಾಲಯಕ್ಕೆ ಬನ್ನಿ ಎಂದು ಮತ್ತೊಮ್ಮೆ ಆದರದಿಂದ ಹೇಳಿ ಹೊರಟು ಹೋದನು. ಹೊರಡುವ ವೇಳೆಗೆ ಅನಾಯಾಸವಾಗಿ ಮೃಷ್ಟಾನ್ನ ಭೋಜನ ದೊರಕಿತೆಂದು, ಮಂಗಳ ಸೂಚನೆಯೆಂದು ದಾಸರು ಆನಂದಿತರಾದರು. ಸಮಯಕ್ಕೆ ಸರಿಯಾಗಿ ರುಕ್ಮಿಣಿ ದೇವಾಲಯದ ಬಳಿಗೆ ಬಂದರು. ಆ ತೇಜಸ್ವೀ ಬ್ರಾಹ್ಮಣನೇ ಲಗುಬಗೆಯಿಂದ ಬಂದು ಸ್ವಾಗತಿಸಿ ದಾಸರನ್ನು ಕರೆದೊಯ್ದು ಭೋಜನದ ಪಂಕ್ತಿಯಲ್ಲಿ ಅವರಿಗೆ ಮೀಸಲಾಗಿದ್ದ ಜಾಗದಲ್ಲಿ ಅವರನ್ನು ಕುಳ್ಳಿರಿಸಿದನು. ಸಾಲು ಸಾಲಾದ ನಳನಳಿಸುತ್ತಿದ್ದ ಕುಡಿ ಬಾಳೆಲೆಗಳು. ಪಂಕ್ತಿಯಲ್ಲಿ ಕುಳಿತಿದ್ದವರೋ ಒಬ್ಬರಿಗಿಂತ ಒಬ್ಬರು ತೇಜಸ್ವಿ ಗಳಾದ ಬ್ರಾಹ್ಮಣರು. ಸರ್ವಾಂಗ ಸುಂದರಿಯರೂ ಆದ ಹೆಂಗಳೆಯರು ಸಾಲುಸಾಲಾಗಿ ಬಂದು ಕಾಲ್ಗೆಜ್ಜೆಗಳ ಇನಿದನಿಯೊಂದಿಗೆ ಮಿಂಚಿನಂತೆ ಸುಳಿದಾಡುತ್ತಾ ಎಲೆಗಳಿಗೆ ವಿವಿಧ ಪಕ್ವಾನ್ನಗಳನ್ನು ಬಡಿಸತೊಡಗಿದರು. ಒಂದಕ್ಕಿಂತ ಒಂದು ಪದಾರ್ಥ ಕಣ್ಣಿಗೆ ಇಂಪು. ಸವಿದರಂತೂ ಅಮೃತ ಸಮಾನ. ಅಂತಹ ರುಚಿ ರಚನೆಯನ್ನು ದಾಸರು ಎಂದೂ ಕಂಡಿರಲೇ ಇಲ್ಲ. ಮೇಲಾಗಿ ಅತಿಥೇಯ ಗೃಹಸ್ಥನ ಉಪಚಾರಗಳ ಸುರಿಮಳೆ. ಈ ದಿವ್ಯ ಭೋಜನವನ್ನು ಮಾಡಿ ದಾಸರು ಪರಮ ಸಂತುಷ್ಟರಾದರು. ತನು ಮನಗಳು ಅಪೂರ್ವ ತೃಪ್ತಿಯನ್ನು, ಅನಂದವನ್ನು ಅನುಭವಿಸಿದವು. ಭೋಜನ ಮುಗಿಸಿ ಆಪೋಶನ ತೆಗೆದುಕೊಂಡು ದಾಸರು ಕೈತೊಳೆದುಕೊಂಡು ಬಂದು ನೋಡುತ್ತಾರೆ. ಜೊತೆಗೆ ಪಂಕ್ತಿಯಲ್ಲಿ ಕುಳಿತವರಿರಲಿ, ಎಲೆಗಳ ಗುರುತೂ

ಇಲ್ಲ. ಬಡಿಸಿದವರ ಸುಳಿವಂತೂ ಮೊದಲೇ ಇಲ್ಲ. ಈ ವಿಚಿತ್ರ ವ್ಯಾಪಾರಕ್ಕೆ ಅಚ್ಚರಿಪಡುತ್ತಾ ರುಕ್ಮಿಣಿ ದೇವಾಲಯದ ಹೊರ ಬಾಗಿಲ ಬಳಿ ಬರಲು, ಆ ತೇಜಸ್ವಿ ಬ್ರಾಹ್ಮಣನು ಮತ್ತೆ ಕಾಣಿಸಿಕೊಂಡು, ಭೋಜನ ಸುಖಕರವಾಗಿತ್ತೆ, ತಮಗೆ ತೃಪ್ತಿಯಾಯಿತೆ ಎಂದು ಕೇಳುತ್ತ ಇದನ್ನು ತೆಗೆದುಕೊಳ್ಳಿ ಎಂದು ಫೇಡೆ, ಸುರಗಿ ಮಾಲೆ ಬುಕ್ಕಿ ಹಿಟ್ಟುಗಳ ಗಂಟನ್ನು (ಫಂಡರಾಪುರದ ಪ್ರಸಾದ ವಿಶೇಷಗಳು) ಇತ್ತು ಅದೃಶ್ಯನಾದನು. ಜಗನ್ನಾಥದಾಸರು ಇದನ್ನು ಭಗವಂತನ ಲೀಲೆಯೆಂದೇ ತಿಳಿದರು. ತಮಗೆ ಮೃಷ್ಟಾನ್ನ ಭೋಜನ ಬಡಿಸಿದವಳು ಸಕಲ ಜೀವಿಗಳಿಗೂ ಅನ್ನ ನೀಡುವ ಜಗಜ್ಜನನಿ ಲಕ್ಷ್ಮೀ ದೇವಿಯೇ ಎಂದರಿತು ತಮ್ಮ ಅದೃಷ್ಟಕ್ಕೆ ತಾವೇ ಸಂತಸಪಡುತ್ತಾ ಮಾನವೀಯತ್ತ ಹೊರಟರು. ಈ ಭೋಜನ ಕೇವಲ ಉದರ ಪೋಷಣೆಗೆ ಅಲ್ಲದೆ ಜ್ಞಾನದ ಹಸಿವನ್ನು ಹಿಂಗಿಸುವ ಆರೋಗ್ಯ, ಆನಂದಗಳನ್ನು ಪ್ರಸಾದಿಸುವ ಅಮೃತಾನ್ನವಾಗಿ ಪರಿಣಮಿಸಿತು. ಜಗನ್ನಾಥದಾಸರಿಗೆ ಹರಿಕಥಾಮೃತ ಸಾರದಂತಹ ಮೇರುಕೃತಿಯನ್ನು ರಚಿಸುವ ಶಕ್ತಿಯನ್ನು ನೀಡಿತು ದೇವಿ ನೀಡಿದ ಈ ಮೃಷ್ಟಾನ್ನ ಭೋಜನ!

ಲಕುಮಿ ಹೃದಯದ ಪಠಣೆ ಮಾತ್ರದಿ ಲಕುಮಿ ತಾ ಸಂತುಷ್ಟಳಾಗ್ವಳು

ಸರ್ವಸಂಪದ ವೀವ ಲಕುಮಿಯೆ
ಸರ್ವಭಾಗ್ಯವನೀವ ದೇವಿಯೆ
ಸರ್ವಮಂಗಳ ವೀವ ಸುರವರ ಸಾರ್ವಭೌಮಿಯಳೆ
ಸರ್ವ ಜ್ಞಾನವನೀವ ಜ್ಞಾನಿಯೆ
ಸರ್ವಸುಖಫಲದಾಯಿ ಧಾತ್ರಿಯೆ
ಸರ್ವ ಕಾಲದಿ ಭಜಿಸಿ ಬೇಡಿದೆ ಸರ್ವ ಪುರುಷಾರ್ಥ ||

ತಾಯಿ ಲಕ್ಷ್ಮೀದೇವಿಯ ಅಡಿದಾವರೆಗಳಲ್ಲಿ ಭಕ್ತನ ಬಿನ್ನಹ ಇದೆ ತಾನೆ? ಶ್ರೀ ಸೂಕ್ತ, ಲಕ್ಷ್ಮೀ ಹೃದಯ ವೇದ ಮಂತ್ರಗಳಿಂದ ಪ್ರಾರಂಭವಾದ ಲಕ್ಷ್ಮೀ ಸ್ತೋತ್ರಾತ್ಮಕವಾದ ಮಹಾ ಪ್ರವಾಹವು ದಾಸರವಾಣಿಯವರೆಗೂ ಏಕಪ್ರಕಾರ ವಾಗಿ ಹರಿದು ಬಂದಿದೆ. ಲಕ್ಷ್ಮೀದೇವಿಯನ್ನು ಸ್ತುತಿಸುವ ಸಂಸ್ಕೃತ ಸ್ತೋತ್ರ ಪ್ರಪಂಚದಲ್ಲಿ ಅಥರ್ವಣ ರಹಸ್ಯದಲ್ಲಿ ಪ್ರತಿಪಾದಿತವಾದ ಲಕ್ಷ್ಮೀಹೃದಯ ಸ್ತೋತ್ರವು ಅತ್ಯಂತ ಶ್ರೇಷ್ಠವಾಗಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ

ಸಮಯದಲ್ಲಿ ವಿದ್ಯಾರಣ್ಯರು ಈ ಲಕ್ಷ್ಮೀಹೃದಯವನ್ನು, ಶ್ರೀಸೂಕ್ತವನ್ನೂ, ನಿರಂತರವಾಗಿ ಜಪಿಸಿಯೇ ಸುವರ್ಣ ವೃಷ್ಟಿಯಾಗುವಂತೆ ಮಾಡಿದರೆಂದು ಐತಿಹ್ಯವಿದೆ. ಬಹು ಸುಂದರವಾದ ಭಾವಗಳಿಂದಲೂ, ವರ್ಣನೆಗಳಿಂದಲೂ ಕೂಡಿರುವ ಈ ಸ್ತುತಿ ಕಾವ್ಯಮಯವಾಗಿದೆ.

ಸಂಸ್ಕೃತ ಭಾಷೆಯಲ್ಲಿರುವ ಲಕ್ಷ್ಮೀಹೃದಯವು ಸುಲಲಿತವಾಗಿದ್ದರೂ ಬೀಜಾಕ್ಷರಗಳಿಂದ ಕೂಡಿರುವುದರಿಂದ ಸರ್ವರಿಂದ ಸರ್ವಕಾಲಗಳಲ್ಲಿ, ಸರ್ವಸ್ಥಳಗಳಲ್ಲಿ, ಸರ್ವಾವಸ್ಥೆಯಲ್ಲಿ ಪಠಿಸಲು ಅಸಾಧ್ಯವಾಗಿದೆ. ಲಕ್ಷ್ಮೀ ಹೃದಯವು ಅಸಾಧಾರಣ ಮಂತ್ರ ಶಕ್ತಿಯಿಂದ ಕೂಡಿರುವುದರಿಂದ ಮತ್ತು ಇದರ ಪಠಣೆ ದೇವಿಯನ್ನು ಸಂತುಷ್ಟಗೊಳಿಸುವ ಸುಲಭ ಮಾರ್ಗವಾಗಿರು ವುದರಿಂದ ಹರಿದಾಸವರೇಣ್ಯರಾದ ಗುರು ಜಗನ್ನಾಥದಾಸರು ಮೂಲ ಲಕ್ಷ್ಮೀಹೃದಯವನ್ನು ಕನ್ನಡ ಭಾಷೆಗೆ ಅನುವಾದಿಸಿದರು. ಕನ್ನಡ ಲಕ್ಷ್ಮೀ ಹೃದಯದಲ್ಲಿ ಬೀಜಾಕ್ಷರಗಳು ಇರದಿರುವುದರಿಂದ ಎಲ್ಲರೂ ಇದನ್ನು ಸುಲಭವಾಗಿ ಪಠಣೆ ಮಾಡಬಹುದು. ಸುಲಭವಾಗಿ ಅರ್ಥವಾಗುವುದರಿಂದ ಅರ್ಥಾನುಸಂಧಾನಪೂರ್ವಕವಾಗಿಯೆ ಪಾರಾಯಣ ಮಾಡಬಹುದು. ಇದು ಗುರುಜಗನ್ನಾಥದಾಸಾರ್ಯರು ನಮಗಿತ್ತ ಅಮೂಲ್ಯ ಕೊಡುಗೆ.

ಲಕ್ಷ್ಮೀಹೃದಯದ ಮಹಿಮೆ, ಅದನ್ನು ಪಠಣ ಮಾಡುವ ಬಗೆಗಳು ಸ್ತೋತ್ರದಲ್ಲಿ ವಿಶದವಾಗಿ ಹೇಳಲ್ಪಟ್ಟಿವೆ. ಇದರ ಪಠಣೆ ಮಾತ್ರದಿಂದ ಲಕ್ಷ್ಮೀದೇವಿ ಪರಮಸಂತುಷ್ಟಳಾಗುವಳು. ಅಖಿಳಾರ್ಥಗಳೂ ದೊರಕುವುವು. ಸತ್‌ಸಂತಾನ ಪ್ರಾಪ್ತಿಯಾಗುವುದು. ಮನೆಯಲ್ಲಿ ಕನಕವೃಷ್ಟಿಯೇ ಕರೆ ಯುವುದು (ಎಂದರೆ ಎಲ್ಲ ಬಗೆಯ ಸೌಭಾಗ್ಯಗಳು ದೊರೆಯುವುವು.) ಮಂಗಳ ಕಾರ್ಯಗಳು ಸದಾ ಜರಗುವುವು. ಒಟ್ಟಿನಲ್ಲಿ ಬಯಸಿದ ಸತ್ ಅಪೇಕ್ಷೆಗಳೆಲ್ಲ ಕೈಗೂಡುವುವು. ಲಕ್ಷ್ಮೀಹೃದಯ ಸ್ತೋತ್ರವನ್ನು ನಾನಾ ರೀತಿಗಳಲ್ಲಿ ಪಠಿಸಬಹುದು. ಲಕ್ಷ್ಮೀಹೃದಯ ಪಠಣೆಯ ಆದ್ಯಂತಗಳಲ್ಲಿ ನಾರಾಯಣ ಹೃದಯವನ್ನು ಹೇಳಿ ಸಂಪುಟೀಕರಣಗೊಳಿಸಿ ಪಠಿಸುವುದು. ಕನ್ನಡ ಲಕ್ಷ್ಮೀಹೃದಯವನ್ನು ಪಠಿಸುವವರು ಗುರುಜಗನ್ನಾಥದಾಸರಿಂದಲೇ ರಚಿತವಾದ ವೆಂಕಟೇಶಸ್ತವರಾಜವನ್ನು ಪಠಿಸಬಹುದು. ದಿನವೂ ಒಂದು ಬಾರಿ ದೇವಪೂಜಾನಂತರ ಅಥವಾ ಸಂಧ್ಯಾ ದೀಪಾರಾಧನೆಯ ಸಮಯ ದಲ್ಲಿ, ಶುಕ್ರವಾರದ ದಿವಸ ಸಾಯಂಕಾಲ 5ಬಾರಿ (ಪಂಚವಾರ) ನವರಾತ್ರಿ ಯಲ್ಲಿ ಏಕೋತ್ತರವಾರವೃಧ್ಯ (ಒಂದಧಿಕದಿನ ದಿನದಿ) ಪಠಿಸುವುದು.

ಸಂಕಲ್ಪಪೂರ್ವಕವಾಗಿ 5000ಬಾರಿ ಪಠಿಸುವುದು ಇತ್ಯಾದಿ. ಇದು ರಮಾನಾರಾಯಣರಿಬ್ಬರನ್ನೂ ಪ್ರಸನ್ನೀಕರಿಸಿಕೊಳ್ಳುವ ಸುಲಭ ಮಾರ್ಗ ಗಳಲ್ಲೊಂದಾಗಿದೆ.

ಕರುಣದಿ ಕಣ್ಣು ತೆರೆದು ಬಾರಮ್ಮ ಸಿರಿಯೆ

ಕರವೀರಪುರದಲ್ಲಿ ಕೊಲ್ಲಾಪುರದೇವಿ ಮಹಾಲಕ್ಷ್ಮೀಯ ದಿವ್ಯ ಭವ್ಯ ದೇಗುಲ. ಸರ್ವಾಭರಣ ಭೂಷಿತೆಯಾದ ಮಂದಸ್ಮಿತ ಸುಂದರ ವದನಾರ ವಿಂದೆಯಾದ ದೇವೀಮೂರ್ತಿ. ಅವಳ ಮುಂದೆ ನಿಂತು ಹರಿದಾಸರೊಬ್ಬರು ಹಾಡುತ್ತಿದ್ದಾರೆ. ಭಕುತಿ ತುಂಬಿದ ಹೃದಯದಿಂದ ಉಕ್ಕಿ ಬರುತ್ತಿರುವ ಗಾನ ಲಹರಿ ಸುತ್ತಲಿನ ಜನರನ್ನು ಮಂತ್ರಮುಗ್ಧರನ್ನಾಗಿಸಿದೆ. ಗರ್ಭಗುಡಿಯಲ್ಲಿ ದೇವಿಯನ್ನು ಆರಾಧಿಸುತ್ತಿದ್ದ ಕೊಲ್ಲಾಪುರದ ಛತ್ರಪತಿ ಮಹಾರಾಜ ಈ ದಿವ್ಯ ಗಾಯನವನ್ನು ಆಲಿಸುತ್ತಾ ತನ್ಮಯನಾಗಿ ಕುಳಿತುಬಿಟ್ಟಿದ್ದಾನೆ. ಭಕ್ತನ ಈ ಗಾಯನಕ್ಕೆ ದೇವಿಯೂ ತಲೆದೂಗುತ್ತಿದ್ದಾಳೇನೋ ಎನಿಸುತ್ತಿದೆ. ಇದಾವುದರ ಪರಿವೆಯೂ ಇಲ್ಲದೆ ಅವರು ಅರೆದೆರೆದ ಕಣ್ಣುಗಳಿಂದ ದೇವಿಯನ್ನೇ ದಿಟ್ಟಿಸುತ್ತ ಹಾಡುತ್ತಲೇ ಇದ್ದಾರೆ.

ಕರುಣದಿ ಕಣ್ಣು ತೆರೆದು ಬಾರಮ್ಮ ಸಿರಿಯೆ
ಧರೆಯೊಳಗೆ ಸುಂದರತರ ಕೊಲ್ಲಾಪುರ
ಸಿಂಹಾಸನದಿ ಮೆರೆವ ದೊರೆಯೆ॥
ಬಡವ ರಭೀಷ್ಟವ ಕೊಡುವಳೆಂದು ಬಡ
ಬಡಿಸಿ ಬಂದೆ ನಿನ್ನೊಡಲಿನ ಮೊರೆಯೆ
ಕೊಟ್ಟರೆ ಕಮಲೇಶ ವಿಠಲರಾಯನ
ಪಟ್ಟದರಾಣಿ ಎಂಬ ಕಟ್ಟಳೆ ಖರೆಯೆ॥

ಹೀಗೆ ಹಾಡುತ್ತಿದ್ದವರು ಸುರಪುರದ ಆನಂದದಾಸರು. ಮಹಾಲಕ್ಷ್ಮಿಯ ಅನನ್ಯಭಕ್ತರು. ಯಾವ ಕ್ಷೇತ್ರದಲ್ಲಿ ಶ್ರೀ ಪಾದರಾಯರು ತಪಸ್ಸುಮಾಡಿ ಅಶ್ವತ್ಥ ನರಸಿಂಹದೇವರನ್ನು ಪ್ರತಿಷ್ಠಾಪಿಸಿದರೋ, ಯಾವ ಕ್ಷೇತ್ರದಲ್ಲಿ ಅದೇ ಅಶ್ವತ್ಥ ನರಸಿಂಹದೇವರ ಸೇವೆಯಿಂದ ಕೂಸಮ್ಮನೆಂಬ ಸಾಧ್ವೀಮಣಿಯು ವಿಜಯದಾಸರಂಥಾ ವಿಭೂತಿ ಪುರುಷರನ್ನು ಮಗನನ್ನಾಗಿ ಪಡೆದಳೋ ಅದೇ ಮಂಗಳ ತರಂಗಿಣಿ ತುಂಗಭದ್ರಾನದಿ ದಡದ ಚೀಕಲಪರವಿ

ಗ್ರಾಮದಲ್ಲಿ ಆನಂದದಾಸರ ತಂದೆ ತಾಯಿಗಳು (ಅವರ ಹೆಸರುಗಳು ತಿಳಿದಿಲ್ಲ) ಅಶ್ವತ್ಥನರಸಿಂಹನ ಸೇವೆ ಮಾಡಿ ಆನಂದ, ಶೇಷ ಎಂಬ ಇಬ್ಬರು ಮಕ್ಕಳನ್ನು ಪಡೆದರು. ಅವರಲ್ಲಿ ಹಿರಿಯರೇ ಆನಂದದಾಸರು. ಬಾಲ್ಯ ದಲ್ಲಿಯೇ ಮಾತಾಪಿತೃಗಳ ವಿಯೋಗವಾಗಿ, ವಿದ್ಯಾರ್ಜನೆಗೆ ಸುರಪುರಕ್ಕೆ ಹೋಗಿ, ಅಲ್ಲಿನ ರಾಜರ ಆಶ್ರಯದಲ್ಲಿ ವಾಸಮಾಡಿ, ವಿದ್ಯಾಪಾರಂಗತರಾಗಿ, ಕಮಲೇಶ ವಿಠಲನೆಂಬ ಅಂಕಿತೋಪದೇಶವನ್ನು ಹೊಂದಿ ಹರಿದಾಸರಾಗಿ ಸುರಪುರದ ಆನಂದದಾಸರೆಂದೇ ಪ್ರಖ್ಯಾತರಾದರು. ಸುಮಾರು 40ವರ್ಷ ಗಳವರೆಗೆ ಬಹು ಸಿರಿವಂತರಾಗಿ ಮಹಾ ವೈಭವದಿಂದ ಬಾಳಿದರು. ಕಾಲಕ್ರಮೇಣ ಇವರಿಗೆ ಆಶ್ರಯವಿತ್ತಿದ್ದ ರಾಜನು ಮರಣ ಹೊಂದಲು, ರಾಜಾಶ್ರಯ ಪ್ರೋತ್ಸಾಹಗಳು ತಪ್ಪಿಹೋಗಿ, ದಿನೇ ದಿನೇ ಬಡತನ ಆವರಿಸಿಕೊಂಡಿತು. ದಿನ ನಿತ್ಯದ ಜೀವನಕ್ಕೂ ಕಷ್ಟವಾಯಿತು. ಬಡತನದಿಂದ ನೊಂದುಬೆಂದು ಬಸವಳಿದು ಭಂಗಬವಣೆಗಳಿಗೆ ಗುರಿಯಾದಾಗ ದಾಸರಿಗೆ ಕುಲದೇವಿ ಕೊಲ್ಲಾಪುರ ಮಹಾಲಕ್ಷ್ಮೀಯ ಅನುಗ್ರಹದ ಹಂಬಲ ಹುಟ್ಟಿತು. ಸಮಸ್ತ ದಾರಿದ್ರ್ಯ ಪರಿಹಾರಕಳೂ, ಸರ್ವ ಸಂಪದಭಿಮಾನಿಯೂ ಆದ ಮಹಾಲಕ್ಷ್ಮಿಯ ಉಪಾಸನೆ ಮಾಡುವೆನೆಂದು ಸಂಕಲ್ಪಸಿದರು. ಮಹಾಲಕ್ಷ್ಮಿ ಮಂತ್ರಜಪಕ್ಕೆ ತೊಡಗಿದರು. ಮಿತಾಹಾರ, ಜಿತ ಮನಸ್ಸಿನ ಒಂದು ವರ್ಷ ಪರ್ಯಂತದ ಉಪಾಸನೆ, ಜಪಗಳಿಂದ ದೇವಿಯ ಕಾರುಣ್ಯೋದಯ ವಾಯಿತು. ಕೊಲ್ಲಾಪುರಕ್ಕೆ ಬರಬೇಕೆಂದು ಸ್ವಪ್ನ ಸೂಚನೆಯಾಯಿತು. ಕುಲದೇವಿಯ ದರ್ಶನ ಮಾಡುವೆನೆಂದು ದಾಸರು ಕೊಲ್ಲಾಪುರಕ್ಕೆ ಪಾದಚಾರಿಗಳಾಗಿ ಪ್ರಯಾಣ ಮಾಡಿ ಬಂದು ಸೇರಿದ ಕಾಲ ಶರನ್ನವರಾತ್ರಿ. ಶ್ರೀ ಕ್ಷೇತ್ರವನ್ನು ಸೇರಿ ದೇವಿಯ ದರ್ಶನ ಮಾಡಿದ ದಿನ ಶುಕ್ರವಾರ. ದೇದೀಪ್ಯ ಮಾನಳಾಗಿ ದೇವಿ ಬೆಳಗುತ್ತಿದ್ದಾಳೆ. ದೇವಿ ದರ್ಶನವಾದೊಡನೆ ಹೃದಯದಲ್ಲಿ ಏನೋ ಆಂದೋಲನ, ಉಕ್ಕಿ ಬರುತ್ತಿರುವ ಭಾವತರಂಗಗಳು. ದೇವಿಯೆದುರಿಗೆ ನಿಂತು ದಾಸರು ದೈನ್ಯದಿಂದ ಹೀಗೆ ಪ್ರಾರ್ಥಿಸಿದರು.

ಕರುಣದಿಕಣ್ಣು ತೆರೆದು ಬಾರಮ್ಮ ಸಿರಿಯೆ
ಧರೆಯೊಳಗೆ ಸುಂದರತರ ಕೊಲ್ಲಾಪುರ
ಸಿಂಹಾಸನದಿ ಮೆರೆವ ದೊರೆಯೆ॥

ದಾಸರ ಭಕ್ತಿಗೆ ಮೆಚ್ಚಿ ಒಲಿದು ದೇವಿ ಕಣ್ತೆರೆದು ಅವರನ್ನೊಮ್ಮೆ ನೋಡಿದಳು. ಆ ಕ್ಷಣವೇ ದಾಸರ ಭಾಗ್ಯೋದಯವಾಯಿತು. ದೇವಿಯ

ಸನ್ನಿಧಿಯಲ್ಲಿ ದಿವ್ಯವಾದ ಕೋಕಿಲಕಂಠದಿಂದ ಗಂಧರ್ವರಂತೆ ಗಾಯನ ಮಾಡುತ್ತಿದ್ದಾಗ ಅದೇ ಸಮಯದಲ್ಲಿ ಕೊಲ್ಲಾಪುರದ ಮಹಾರಾಜನು ಶ್ರೀ ದೇವಿಯ ದರ್ಶನಕ್ಕೆ ಬಂದು ಗರ್ಭಾಂಕಣದಲ್ಲಿ ಆರಾಧಿಸುತ್ತಿದ್ದವನು, ದಾಸರ ಹಾಡು ಕೇಳುತ್ತಾ ಪರವಶನಾಗಿ ಕುಳಿತುಬಿಟ್ಟನು. ಅವರಾರೆಂದು ವಿಚಾರಿಸಿಕೊಂಡು ಮರುದಿನ ಪ್ರಾತಃಕಾಲ ಅವರನ್ನು ಅರಮನೆಗೆ ಬರಮಾಡಿ ಕೊಂಡು, ಅವರ ಪೂರ್ವೋತ್ತರಗಳನ್ನು ವಿಚಾರಿಸಿ ಕೈತುಂಬಾ ದ್ರವ್ಯವನ್ನಿತ್ತು ಸನ್ಮಾನಿಸಿದನು. ಕೆಲವು ತಿಂಗಳುಗಳು ಕೊಲ್ಲಾಪುರದಲ್ಲಿಯೇ ಇರಿಸಿ ಕೊಂಡನು. ದೇವಿಯ ಕೃಪೆಯ ಹೊಳೆ ಹರಿದುಬರಲು ದಾಸರ ಬಡತನ ವೆಲ್ಲ ಹೇಳ ಹೆಸರಿಲ್ಲದಂತೆ ಕೊಚ್ಚಿಹೋಯಿತು. ರಾಜಸನ್ಮಾನ, ಬಂಧು ಮಿತ್ರರೊಡನೆ ಪುನರ್ಮಿಲನ, ಹೇರಳವಾಗಿ ಧನ, ಧಾನ್ಯ, ಸಂಪತ್ತು, ಯಶಸ್ಸು, ಮನಸ್ಸಮಾಧಾನ ಎಲ್ಲವೂ ದೊರೆತು ದಾಸರು ಸುಖಿಗಳಾದರು. ಇವೆಲ್ಲವೂ ಮಹಾಲಕ್ಷ್ಮೀದೇವಿಯ ಕೃಪೆಯೇ, ಮಹಿಮೆಯೇ ಎಂದರಿತು ಕೊಲ್ಲಾಪುರದಲ್ಲಿ ಇದ್ದಷ್ಟು ದಿನವೂ ಪ್ರತಿದಿನವೂ ದೇವಿ ಮಂದಿರಕ್ಕೆ ಹೋಗಿ ಅವಳ ದರ್ಶನಮಾಡಿ ಪೂಜಿಸಿ ಸ್ತುತಿಸಿ ಧನ್ಯರಾದರು.

ರಮಾ ಸಮುದ್ರನ ಕುಮಾರಿ ನಿನ್ನ ಸರಿಮಾನರ್‍ಯಾರಮ್ಮ
ಸುಮಾಸ್ತ್ರನಯ್ಯನೆದೆಯ ಮ್ಯಾಲೆ ಸತತಬ
ಹು ಮಾನದಿ ಮೆರೆವ ಮಹಾಮಹಿಮಳೆ"

ಎಂದು ಹೊಗಳಿ ಕೊಂಡಾಡಿದರು. "**ಶ್ರೀ ಸಂತುಷ್ಟಾ ಹರೇ ಸ್ತೋಷಂ ಜನಯೇತ್ ಕ್ಷಿಪ್ರಮೇವತು**" ಶ್ರೀ ದೇವಿಯು ಒಲಿದರೆ ಹರಿಯೂ ಬೇಗ ಒಲಿಯುವಂತೆ ಮಾಡುತ್ತಾಳೆ ಎಂಬಂತೆ ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾದ ಆನಂದದಾಸರು ಯಥಾಕಾಲದಲ್ಲಿ ಭಗವಂತನ ಅಪರೋಕ್ಷ ಜ್ಞಾನವನ್ನು ಪಡೆದು ಕೃತಾರ್ಥರಾದರು.

ತಾಮ್ರದ ಕಾಸು ಬಂಗಾರದ ನಾಣ್ಯವಾಯಿತು

ಶ್ರೀ ದೇವಿಯ ಸ್ತುತಿ ಪುರುಷಮಣಿ ಸ್ಪರ್ಶ ಕನಕಧಾರೆಯನ್ನೇ ಕರೆವ ದೇವಿ ಲೋಹವನ್ನು ಹೊನ್ನಾಗಿಸಲಾರಳೆ! ಧನಲಕ್ಷ್ಮೀ ಸ್ವರೂಪಿಣಿ ಧನ ನೀಡಲಾರಳೆ! ಲಕ್ಷ್ಮೀ ಸ್ತೋತ್ರಗಳ ಪಾರಾಯಣದ ಮಹಿಮೆಯನ್ನು ಅಷ್ಟಿಷ್ಟೆಂದು ವರ್ಣಿಸಲಾಗುವುದಿಲ್ಲ. ಮಹಿಮಾನ್ವಿತವೂ ವರಪ್ರಸಾದವೂ ಆದ

ಹಲವಾರು ಸ್ತೋತ್ರಗಳಿವೆ. ವಿಷ್ಣುತೀರ್ಥರಿಂದ ರಚಿತವಾದ ರಮಾ ಸ್ತೋತ್ರ ಅಂತಹುದೊಂದು ಮಹಿಮಾನ್ವಿತ ಕೃತಿ.

ಅಡವಿ ಆಚಾರ್ಯರೆಂದೂ ಅರಣ್ಯಕಾಚಾರ್ಯರೆಂದೂ ಪ್ರಸಿದ್ಧರಾದ ಶ್ರೀ ವಿಷ್ಣುತೀರ್ಥರು ಮಹಾತಪಸ್ವಿಗಳು. ಹರಿದಾಸಪರಂಪರೆಯ ಯತಿಚತುಷ್ಟಯರಲ್ಲಿ ಒಬ್ಬರಾದ ವ್ಯಾಸತತ್ವಜ್ಞರ ಪ್ರಮುಖ ಶಿಷ್ಯರು. ಆಗರ್ಭ ಶ್ರೀಮಂತರಾಗಿದ್ದರು. ಕೇವಲ ಪುರಂದರದಾಸರ ಒಂದು ಹಾಡನ್ನು ಕೇಳಿದೊಡನೆಯೇ ವೈರಾಗ್ಯತಾಳಿ ತಮ್ಮದೆಲ್ಲವನ್ನೂ ದಾನ ಮಾಡಿ ಮಧುಕರಿ ವೃತ್ತಿಯಿಂದ ಜೀವಿಸತೊಡಗಿದ ವಿರಕ್ತಶಿಖಾಮಣಿಗಳು.

ಸಿರಿದೇವಿ ಹಾಲಕಡಲಿನಿಂದ ಹುಟ್ಟಿದಂತೆ ಕಿನ್ನಾಳ ಎಂಬ ಗ್ರಾಮದಲ್ಲಿ ಈ ರಮಾ ಸ್ತೋತ್ರದ ಉದಯವಾಯಿತು. ಶ್ರೀ ವಿಷ್ಣುತೀರ್ಥರು ಸಂಚಾರ ಮಾಡುತ್ತಾ ಕಿನ್ನಾಳ ಎಂಬ ಗ್ರಾಮಕ್ಕೆ ಬಂದಾಗ ಅಲ್ಲಿನ ದೇಸಾಯಿ ಅವರನ್ನು ಸ್ವಾಗತಿಸಿ ಬಹುವಾಗಿ ಆದರಿಸಿ ಸತ್ಕರಿಸಿದನು. ಗುರುಗಳ ಅನುಗ್ರಹದಿಂದ ಆ ದೇಸಾಯಿಯನ್ನು ಬಹಳ ದಿನಗಳಿಂದ ಕಾಡುತ್ತಿದ್ದ ಎಲೆಗೆ ಬಡಿಸಿದ ಅನ್ನ ಹುಳುಗಳಂತೆ ಕಾಣುವ ವಿಚಿತ್ರರೋಗ ಸಂಪೂರ್ಣವಾಗಿ ಗುಣವಾಯಿತು. ವಿಷ್ಣುತೀರ್ಥರ ಮಹಾಮಹಿಮೆಗೆ ಬೆರಗಾದ ದೇಸಾಯಿ ಅವರ ಅವಿಚ್ಛಿನ್ನ ಭಕ್ತನಾಗಿ ಗುರುಗಳನ್ನು ಶ್ರದ್ಧಾಭಕ್ತಿಗಳಿಂದ ಸೇವಿಸುತ್ತಾ ಶಿಷ್ಯ ಸಮೂಹವನ್ನು ಭೋಜನಾದಿ ಉಪಚಾರಗಳಿಂದ ಸತ್ಕರಿಸುತ್ತಿದ್ದನು. ಹೀಗಿರಲು ಆ ಪ್ರದೇಶದಲ್ಲಿ ಭೀಕರವಾದ ಕ್ಷಾಮ ತಲೆ ದೋರಿತು. ತಿನ್ನಲು ಅನ್ನವಿಲ್ಲದೆ, ಕುಡಿಯಲು ನೀರಿಲ್ಲದೆ ಜನತೆ ತಪಿಸತೊಡಗಿದರು. ಭೋಜನ ನೀಡುವುದು ದೇಸಾಯಿಗೆ ದುಸ್ತರವಾಯಿತು. ದೇಸಾಯಿಯು ಆರ್ತನಾಗಿ ಗುರುಗಳನ್ನು ಶರಣು ಹೊಂದಲು, ಅವರು ಅವನಿಗೆ ಅಭಯವನ್ನಿತ್ತರು. ಭಾಗ್ಯ ದೇವತೆಯೂ, ಧನಧಾನ್ಯಲಕ್ಷ್ಮೀರೂಪಿಣಿಯೂ ಆದ ದೇವಿಯನ್ನು ಪ್ರಾರ್ಥಿಸುತ್ತಾ ರಮಾ ಸ್ತೋತ್ರವನ್ನು ರಚಿಸಿದರು. ತಮ್ಮ ನಿತ್ಯ ಪೂಜಾ ಕಾಲದಲ್ಲಿ ಒಂದು ತಾಮ್ರದ ಅರ್ಧಾಣೆಯನ್ನು (ಆ ಕಾಲದ ನಾಣ್ಯ) ಅರ್ಚಾಮೂರ್ತಿಯ ಕೆಳಗಿರಿಸಿ, ಪೂಜಿಸಿ, ಪೂಜಾನಂತರ ಈ ರಮಾ ಸ್ತೋತ್ರವನ್ನು ಅನುಸಂಧಾನ ಪೂರ್ವಕವಾಗಿ ಪಠಣೆ ಮಾಡಿ, ನೈವೇದ್ಯ ಮಹಾಮಂಗಳಾರತಿಯ ನಂತರ ಆ ನಾಣ್ಯವನ್ನು ಕೈಗೆ ತೆಗೆದುಕೊಳ್ಳಲು ಭಕ್ತ ಶ್ರೇಷ್ಠನ ಭಕ್ತಿ ಪೂರ್ವಕವಾದ ಪ್ರಾರ್ಥನೆಗೆ ಮೆಚ್ಚಿ ಲಕ್ಷ್ಮೀದೇವಿ ಪ್ರಸನ್ನಳಾದಳೆಂಬಂತೆ ರಮಾ ಸ್ತೋತ್ರದಿಂದ ಅಭಿಮಂತ್ರಿತವಾದ ತಾಮ್ರದ ಅರ್ಧಾಣೆಯು ಬಂಗಾರದ ನಾಣ್ಯವಾಗಿ

ಪರಿವರ್ತಿತವಾಗಿತ್ತು. ಅದನ್ನು ಮಾರಿ ಬಂದ ಹಣದಿಂದ ಶಿಷ್ಯರನ್ನೂ, ಆಶ್ರಿತರಾದ ಇತರ ಜನರನ್ನು ಸಲಹಿದರಂತೆ. ಸುಮಾರು ಒಂದು ವರ್ಷಕಾಲ ಇದೇ ರೀತಿ ಪ್ರತಿದಿನವೂ ರಮಾ ಸ್ತೋತ್ರವನ್ನು ಪಠಿಸಿ ತಾಮ್ರದ ಅರ್ಧಾಣೆ ಯನ್ನು ಬಂಗಾರದ ನಾಣ್ಯವಾಗಿ ಪರಿವರ್ತಿಸುತ್ತಾ ಶಿಷ್ಯರನ್ನು ಕಾಪಾಡಿದ ರಂತೆ. ನಂತರ ದೇಶವು ಸುಭಿಕ್ಷವಾಯಿತು. ಶ್ರೀಸೂಕ್ತ, ಅಂಭೃಣೀಸೂಕ್ತ ಮುಂತಾದ ವೇದ ಮಂತ್ರಾರ್ಥಗರ್ಭಿತವಾದ ವಿಷ್ಣುತೀರ್ಥರ ಅದ್ಭುತ ಮಂತ್ರ ಸಿದ್ಧಿಯಿಂದ ಮೂಡಿಬಂದ ರಮಾಸ್ತೋತ್ರವನ್ನು ಭಕ್ತಿಪೂರ್ವಕವಾಗಿ ಪಠಣೆ ಮಾಡಿದರೆ ದಾರಿದ್ರ್ಯವು ನಾಶವಾಗಿ ಯಥಾಯೋಗ್ಯತಾನುಸಾರ ಸಂಪತ್ತು ಪ್ರಾಪ್ತವಾಗುವುದು ಎಂದು ಫಲಶೃತಿಯಿದೆ.

ಶ್ರೀಯಂವಾಸಯ ಮೇಕುಲೇ ಮಾತರಂ ಪದ್ಮ ಮಾಲಿನೀಂ

ಶ್ರೀ ಸೂಕ್ತದಲ್ಲಿ **"ಶ್ರೀಯಂ ವಾಸಯೆ ಮೇಕುಲೇ ಮಾತರಂ ಪದ್ಮ ಮಾಲಿನೀಂ" ನಿಚ ದೇವೀಂ ಮಾತರಂ ಶ್ರೀಯಂ ವಾಸಯ ಮೇಕುಲೇ"** ಎಂಬ ಮಂತ್ರಗಳು ಬರುತ್ತವೆ. ದೇವಿಯ ಕೃಪಾಕಟಾಕ್ಷ ನಮ್ಮ ವಂಶದ ಮೇಲೆ ನಿರಂತರವಾಗಿರಲಿ ಎಂಬರ್ಥ ಕೊಡುವ ಮಂತ್ರಗಳಿವು. ಸಂತಾನ ಲಕ್ಷ್ಮೀ ದೇವಿಯ ಕರುಣೆಯ ನೋಟ ನಮ್ಮನ್ನಷ್ಟೇ ಅಲ್ಲ ನಮ್ಮ ವಂಶವನ್ನೆಲ್ಲ ಕಾಪಾಡುತ್ತದೆ ಎಂಬುದಕ್ಕೆ ನಿದರ್ಶನ, ಪಂಡಿತರ ಮನೆತನವೆಂದೇ ಪ್ರಸಿದ್ಧವಾದ ಪಾಂಡುರಂಗಿ ವಂಶದ ಮೂಲ ಪುರುಷರಾದ ಆನಂದಭಟ್ಟರ ಕತೆ. ಪುಣತಾಂಬೆ ಎಂಬ ಗ್ರಾಮದಲ್ಲಿ ಸುಮಾರು 500 ವರ್ಷಗಳ ಹಿಂದೆ ಆನಂದಭಟ್ಟರೆಂಬುವರು ವಾಸವಾಗಿದ್ದರು. ಅವರ ಕುಲದೇವತೆ ಕೊಲ್ಲಾಪುರದ ಲಕ್ಷ್ಮೀದೇವಿ. ಆನಂದಭಟ್ಟರಿಗೆ ಕಾರಣಾಂತರಗಳಿಂದ ಬಾಲ್ಯದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಲು ಅವಕಾಶವಾಗಿರಲಿಲ್ಲ. ವಿದ್ಯೆಗೆ ಅಪಾರಗೌರವವಿದ್ದ ಆ ಕಾಲದಲ್ಲಿ ವಿದ್ಯಾವಿಹೀನರಾಗಿದ್ದ ಆನಂದಭಟ್ಟರು ಬಹುವಾಗಿ ಅವಹೇಳನಕ್ಕೆ, ತಿರಸ್ಕಾರಕ್ಕೆ ಗುರಿಯಾಗುತ್ತಿದ್ದರು. ಅದರಿಂದ ಬಹುವಾಗಿ ನೊಂದು ವೇದಾಭಿಮಾನಿಯಾದ ಕುಲದೇವತೆಯಾದ ಲಕ್ಷ್ಮೀದೇವಿಯ ಕೃಪೆಯಿಂದ ವಿದ್ಯಾಪಾರಂಗತನಾಗುವೆನೆಂದು ಸಂಕಲ್ಪಿಸಿ ಕೊಲ್ಲಾಪುರಕ್ಕೆ ಹೋಗಿ ಕೊಲ್ಲಾಪುರದ ಮಹಾಲಕ್ಷ್ಮೀ ಸನ್ನಿಧಾನದಲ್ಲಿ ದೇವಿಯ ಉಪಾಸನೆ ಮಾಡುತ್ತಾ 12 ವರ್ಷಗಳ ಕಾಲ ಕಠಿಣ ತಪಸ್ಸನ್ನು ಆಚರಿಸಿದರು. ಪ್ರಸನ್ನಳಾದ ಲಕ್ಷ್ಮೀದೇವಿ ಆನಂದಭಟ್ಟರ ಪುಣ್ಯ ಫಲಿಸಿದ

ಒಂದು ರಾತ್ರಿ ಸ್ವಪ್ನದಲ್ಲಿ ಕಾಣಿಸಿಕೊಂಡು ನಾಳೆ ನಿನಗೆ ಸರ್ಪರೂಪದಿಂದ ದರ್ಶನ ಕೊಡುತ್ತೇನೆ. ನನ್ನನ್ನು ಎಷ್ಟು ಬೆರಳುಗಳಿಂದ ಸ್ಪರ್ಶಿಸುವಿಯೋ ಅಷ್ಟು ತಲೆಮಾರು ನಿನ್ನ ವಂಶದಲ್ಲಿ ವಿದ್ಯೆ, ಸಂತತಿ, ಐಶ್ವರ್ಯ, ಕೀರ್ತಿ ಸಮೃದ್ಧಿಯಾಗಿರುವುದು ಎಂದು ವರವಿತ್ತಳು. ಪುಲಕಿತರಾದ ಆನಂದ ಭಟ್ಟರು ಬೆಳಗಾಗುವುದನ್ನೇ ಎದುರು ನೋಡುತ್ತಿದ್ದರು. ಬೆಳಗಾಗು ತ್ತಿದ್ದಂತೆಯೇ ಶುಭ್ರ ಸ್ನಾತರಾಗಿ, ನಿತ್ಯ ವಿಧಗಳನ್ನಾಚರಿಸಿ ದೇವಾಲಯಕ್ಕೆ ಬಂದು ಎಂದಿನಂತೆ ತಪಸ್ಸಿಗೆ ತೊಡಗಿದರು. ತಪಶ್ಚರ್ಯವನ್ನು ಮುಗಿಸಿ ಎದ್ದು ಬಂದು ದೇವಿಗೆ ದೀರ್ಘದಂಡ ಪ್ರಣಾಮಗೈದು ಕರಮುಗಿದು ನಿಲ್ಲುತ್ತಿದ್ದಂತೆಯೇ ಗರ್ಭಗುಡಿಯಿಂದ ದೊಡ್ಡದಾದ ಸರ್ಪವೊಂದು ಹೊರಬರಲಾರಂಬಿಸಿತು. ಸುತ್ತಲಿನ ಪ್ರದೇಶವೆಲ್ಲ ಪ್ರಕಾಶಮಾನವಾಗುವಂತೆ ಆ ಸರ್ಪದಿಂದ ಹೊಂಬೆಳಕು ಚೆಲ್ಲುತ್ತಿತ್ತು. ಎಲ್ಲೆಡೆಯೂ ಕೇದಿಗೆಯ ಸುವಾಸನೆ ಹರಡಿತು. ಅದು ಮೂರುಸಲ ಮಹಾಲಕ್ಷ್ಮೀಯ ಗರ್ಭಗುಡಿ ಯನ್ನು ಪ್ರದಕ್ಷಿಣೆ ಮಾಡಿ ಬಿಲದಲ್ಲಿ ಪುನಃ ಪ್ರವೇಶಿಸಲು ಆರಂಭಿಸಿತು. ಮಂತ್ರಮುಗ್ಧರಾಗಿ ಅದನ್ನೇ ದಿಟ್ಟಿಸುತ್ತಾ ನಿಂತಿದ್ದ ಆನಂದ ಭಟ್ಟರಿಗೆ ಕನಸಿನಲ್ಲಿ ಲಕ್ಷ್ಮೀದೇವಿಯು ಹೇಳಿದ್ದು ನೆನಪಿನಲ್ಲಿ ಮಿಂಚಿತು. ತಕ್ಷಣವೇ ಧಾವಿಸಿ ಹೋಗಿ ಲಕ್ಷ್ಮೀದೇವಿಯನ್ನು ಪ್ರಾರ್ಥಿಸುತ್ತಾ ಸರ್ಪವನ್ನು ಎರಡೂ ಕೈಗಳ ಹತ್ತು ಬೆರಳುಗಳಿಂದ ಸ್ಪರ್ಶಿಸಿ ಕಣ್ಣಿಗೊತ್ತಿಕೊಂಡರು. ಅಷ್ಟರಲ್ಲಿ ಸರ್ಪಬಿಲ ವನ್ನು ಸೇರಿತು. ಬಾಲದ ತುದಿಗೆ ಇನ್ನೊಮ್ಮೆ ಒಂದು ಕಿರುಬೆರಳು ಮಾತ್ರ ತಾಗಿತು. ಸರ್ಪ ರೂಪದಿಂದ ಬಂದಿದ್ದ ಮಹಾಲಕ್ಷ್ಮೀದೇವಿಯನ್ನು ಹನ್ನೊಂದು ಬೆರಳುಗಳಿಂದ ಮುಟ್ಟಿ ಧನ್ಯರಾದರು. ದೇವಿಯು ವರವಿತ್ತಿದ್ದಂತೆ ಅಗಾಧವಾದ ಸಂಪತ್ತು, ಅಮೋಘವಾದ, ವಿದ್ಯೆ ಅಪಾರವಾದ ಯಶಸ್ಸು, ಕೀರ್ತಿ, ಸತ್ಪುತ್ರರನ್ನು ಪಡೆದು ಭಾಗ್ಯಶಾಲಿಗಳಾಗಿ ದೀರ್ಘಾಯುಷಿಗಳಾಗಿ ಬಾಳಿದರು. ಅವರ ನಂತರದ ಹನ್ನೊಂದು ತಲೆಮಾರಿನವರು ವಿದ್ಯೆ, ಸಂತತಿ, ಸಂಪತ್ತು ಮುಂತಾಗಿ ಅಷ್ಟೈಶ್ವರ್ಯಗಳನ್ನು ಪಡೆದು ಮಹಾಲಕ್ಷ್ಮಿಯ ಭಕ್ತರಾಗಿ ತಮ್ಮ ಕುಲದೇವತೆಯನ್ನು ಸೇವಿಸುತ್ತಾ ಬಾಳಿದರು. ಮಹಾಲಕ್ಷ್ಮೀಯ ವರಪ್ರಸಾದದಿಂದ ಅವರ ವಂಶದಲ್ಲಿ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ ವಿದ್ಯಾಧೀಶರು, ಶ್ರೀ ಸತ್ಯ ವಿಜಯತೀರ್ಥರು, ಶ್ರೀ ಸತ್ಯಪ್ರಜ್ಞತೀರ್ಥರು, ದಾಸ ಶ್ರೇಷ್ಠರೂ ಸಂಸ್ಕೃತ ವಿದ್ವಾಂಸರೂ ಆದ ತಿರುಪತಿಯ ಪಾಂಡುರಂಗಿ ಹುಚ್ಚಾಚಾರ್ಯರು ಮುಂತಾದ ಅನೇಕ

ಮಹಾನುಭಾವರು ಜನಿಸಿದರು. ಪಾಂಡುರಂಗಿ ಮನೆತನದಲ್ಲಿ ಅನೇಕರು ಮಹಾಲಕ್ಷ್ಮಿಯ ಉಪಾಸನೆ ಮಾಡಿ ಅವಳ ಅನುಗ್ರಹ ಪಡೆದಿದ್ದಾರೆ. ಕುಲದೇವಿಯ ಉಪಾಸನೆ ಕುಲವನ್ನೇ ಕಾಪಾಡುತ್ತದೆಯಲ್ಲವೆ!

ಕನಕಧಾರೆಯನ್ನೇ ಕರೆದ ಕನಕಧಾರಾ ಸ್ತೋತ್ರ

ಭಕುತನ ಪ್ರಾರ್ಥನೆಗೆ ಓಗೊಟ್ಟು ಹೊನ್ನಿನ ಮಳೆಯನ್ನು ಸುರಿಸುವ ದಯಾಮಯಿ ಕನಕಲಕ್ಷ್ಮೀದೇವಿ. ಕನಕಧಾರೆಯನ್ನೇ ವರ್ಷಿಸುವಂತೆ ಮಾಡಿದ ಸ್ತೋತ್ರ ಕನಕಧಾರಾ ಸ್ತೋತ್ರವೆಂದೇ ಪ್ರಸಿದ್ಧವಾಯಿತು. ಈ ಸ್ತೋತ್ರ ರಚಿಸಿದ ಮಹಾಭಕ್ತರು ಶಂಕರಾಚಾರ್ಯರು. ಕನಕಧಾರಾ ಸ್ತೋತ್ರರಚನೆಯ ಹಿನ್ನೆಲೆ ಹೀಗಿದೆ. ಶಂಕರಾಚಾರ್ಯರು ತಮ್ಮ ವಿದ್ಯಾಭ್ಯಾಸಕಾಲದಲ್ಲಿ ನಿತ್ಯವೂ ಭಿಕ್ಷೆ ಬೇಡುವುದು ಶಿಷ್ಯ ವೃತ್ತಿಯ ನಿಯಮಗಳಲ್ಲೊಂದಾಗಿತ್ತು. ಒಂದು ದಿನ ಆಚಾರ್ಯರು ಕಡು ದರಿದ್ರನಾದ ಬ್ರಾಹ್ಮಣನೊಬ್ಬನ ಮನೆಯ ಮುಂದೆ ನಿಂತು ಭವತಿ ಭಿಕ್ಷಾಂದೇಹಿ ಎಂದು ಕೇಳಿದರು. ಆ ಮನೆಯ ಗೃಹಿಣಿ ಯಾದರೋ ಜೀರ್ಣ ವಸ್ತ್ರವನ್ನುಟ್ಟು, ತಾನುಟ್ಟಿದ್ದ ಹರಿದ ಸೀರೆಯನ್ನೇ ಹೊಲಿದು ಕೊಳ್ಳುತ್ತಿದ್ದವಳು, ತೇಜಸ್ವಿಯಾದ ಈ ಬ್ರಹ್ಮಚಾರಿಗೆ ಭಿಕ್ಷೆ ನೀಡಲು ಮನೆಯಲ್ಲಿ ಏನೂ ಇಲ್ಲವಲ್ಲಾ ಎಂದು ಚಿಂತಿಸಿ ಮನೆಯಲ್ಲಾ ಹುಡುಕಿ ಕಡೆಗೆ ಸಿಕ್ಕಿದ ಒಂದು ಒಣ ನೆಲ್ಲಿಕಾಯಿಯನ್ನೇ ತಾನಿದ್ಧ ದೀನ ಸ್ಥಿತಿಯಲ್ಲಿ ಹೊರ ಬರಲು ನಾಚಿ, ಬಾಗಿಲನ್ನು ತುಸು ತೆರೆದು, ಕೈಹೊರಗೆ ಚಾಚಿ, ಶ್ರದ್ಧಾಭಕ್ತಿ ಗಳಿಂದ ಶಂಕರಾಚಾರ್ಯರ ಪಾತ್ರೆಗೆ ಹಾಕಿದಳು. ಆಕೆಯ ದಾರಿದ್ರ್ಯವನ್ನು ಕಂಡು ಮನ ಕರಗಿದ, ಮರುಗಿದ ಆಚಾರ್ಯರು ಅದನ್ನು ಬಗೆ ಹರಿಸಲೆಳಸಿ ಸಮಸ್ತ ಸಂಪದಧಿದೇವತೆಯಾದ ಲಕ್ಷ್ಮೀದೇವಿಯಲ್ಲದೆ ಮತ್ತಾರೂ ಈ ದಟ್ಟ ದಾರಿದ್ರ್ಯವನ್ನು ಪರಿಹರಿಸಲಾರರೆಂದು ಮನಗಂಡು ಅಲ್ಲಿ ನಿಂತಿದ್ದಂತೆಯೇ **"ಅಂಗಃ ಹರೇಃ ಪುಲಕಭೂಷಣ ಮಾಶ್ರಯಂತೀಂ"** ಎಂದು ಪ್ರಾರಂಭಿಸಿ ಭಕ್ತಿ ಭಾವ ಪೂರ್ಣವಾಗಿ ದೇವಿಯ ಸಂಪತ್ ಪ್ರದಾಯಕ ಕಟಾಕ್ಷ ವೈಭವವನ್ನು ನಾನಾ ವಿಧವಾಗಿ ಸ್ತುತಿಸಿದರು. ಈ ಸ್ತೋತ್ರಕ್ಕೆ ಪ್ರಸನ್ನಳಾದ ದೇವಿಯು "ಅಶರೀರವಾಣಿಯಿಂದ" ಈ ದರಿದ್ರ ದಂಪತಿಗಳು ಹಿಂದಿನ ಜನ್ಮಗಳಲ್ಲಿ ಯಾವ ದಾನವನ್ನೂ ಮಾಡದೆ ಈ ದುರ್ಗತಿಗೆ ಬಂದಿರುವರು. ಅವರಿಗೆ ಸಂಪತ್ತಿನ ಯೋಗವಿಲ್ಲ ಎಂದು ನುಡಿದಳು. ಶಂಕರಾಚಾರ್ಯರು ದೇವಿಯನ್ನು ಕುರಿತು "ದಯಾಮಯಿ ತಾಯೇ ಸಿರಿಲಕುಮಿಯೇ ಈ ಗೃಹಿಣಿ

ಈಗ ಶ್ರದ್ಧೆ ಭಕ್ತಿಗಳಿಂದ ನನಗೆ ನೀಡಿರುವ ಈ ಒಣ ನೆಲ್ಲಿಕಾಯಿಂದಲೇ ಅವಳ ಪಾಪ ಪರಿಹಾರವಾಗಿರುವುದು. ಕರುಣಿಸಿ ಅವಳನ್ನು ನೋಡಮ್ಮಾ, ಭಾಗ್ಯವನ್ನು ನೀಡಮ್ಮಾ ಎಂದು ಬೇಡಿಕೊಳ್ಳಲು ದೇವಿಯು ಸುಪ್ರಸನ್ನಳಾಗಿ ಬಂಗಾರದ ನೆಲ್ಲಿಕಾಯಿಗಳ ಸುರಿ ಮಳೆಯು ಆ ಮನೆಯಲ್ಲಿ ಸುರಿಯುವಂತೆ ಅನುಗ್ರಹಿಸಿದಳು. ಆ ದಂಪತಿಗಳು ಬಡತನ ಮಾಯವಾಗಿ ಸುಖ ಸೌಭಾಗ್ಯ ಗಳನ್ನು ಅನುಭವಿಸುತ್ತಾ ಆನಂದದಿಂದ ಬಾಳಿದರು. ಅವರಿಗೆ ಸಿರಿತನ ತಂದ ಈ ಸ್ತೋತ್ರವು ಅಂದಿನಿಂದ **ಕನಕಧಾರಾ ಸ್ತೋತ್ರವೆಂದೇ** ಪ್ರಸಿದ್ಧಿಯಾಯಿತು. ಈ ಸ್ತೋತ್ರವನ್ನು ಪ್ರತಿನಿತ್ಯವು ಸಂಧ್ಯಾ ದೀಪಾರಾಧನೆಯ ಸಮಯದಲ್ಲಿ, ಸಾಧ್ಯವಾಗದಿದ್ದರೆ ಶುಕ್ರವಾರ ಸಾಯಂಕಾಲ ಸಮಯದಲ್ಲಿ ಪಠಿಸುತ್ತಾ ಬಂದರೆ ಆ ಮನೆಯಲ್ಲಿ ಸುಖ ಸಂಪತ್ತುಗಳು ಸಮೃದ್ಧಿಯಾಗಿ ಲಕ್ಷ್ಮೀನಿಲಯ ವೆನಿಸುವುದು.

ಲಕ್ಷ್ಮೀ ಲೀಲಾಮೃತ ರಚಿಸಿದ ಪಾಂಡುರಂಗಿ ಹುಚ್ಚಾಚಾರ್ಯರು

ಲಕ್ಷ್ಮೀ ಲೀಲಾಮೃತವೆಂಬ ಬಹು ಸುಂದರವಾದ ಅರ್ಥಗರ್ಭಿತವಾದ ಆದರೆ ಅಷ್ಟೇನೂ ಪ್ರಸಿದ್ಧಿಗೆ ಬಂದಿರದ ಸ್ತೋತ್ರವನ್ನು ರಚಿಸಿದವರು "ಇಂದಿರೇಶ" ಎಂಬ ಅಂಕಿತವುಳ್ಳ ಪಾಂಡುರಂಗೀ ಹುಚ್ಚಾಚಾರ್ಯರು. ಪಾಂಡುರಂಗಿ ಮನೆತನ ಲಕ್ಷ್ಮೀದೇವಿಯ ಅನುಗ್ರಹಕ್ಕೆ ಪಾತ್ರವಾದ ವಂಶವೆನ್ನಬಹುದು. ಈ ವಂಶದ ಮೂಲ ಪುರುಷರಲ್ಲಿ ಒಬ್ಬರಾದ ಆನಂದ ಭಟ್ಟಾಚಾರ್ಯರೆಂಬುವವರು ಕೊಲ್ಲಾಪುರದಲ್ಲಿ 12ವರ್ಷಗಳ ಕಾಲ ಅಖಂಡಸೇವೆ, ನಿರಂತರ ತಪಸ್ಸು ಮಾಡಿದ್ದರಿಂದ ಸರ್ಪರೂಪದಲ್ಲಿ ಮಹಾಲಕ್ಷ್ಮಿಯ ದರ್ಶನವಾಯಿತು. ಆ ಸರ್ಪವನ್ನು ಮುಟ್ಟಿದ್ದ ಮಾತ್ರಕ್ಕೆ ಆಚಾರ್ಯರಿಗೆ ಅಪಾರವಾದ ಜ್ಞಾನ, ಸಂಪತ್ತು ಮತ್ತು ಎಲ್ಲ ವಿಧದ ಐಹಿಕ ಭೋಗಭಾಗ್ಯಗಳು ಲಭ್ಯವಾಯಿತು. ದೇವಿಯ ಉಪಾಸನೆ ಅವರ ಜೀವನದ ಉಸಿರಾಗಿತ್ತು.ಇಂತಹ ದೈವಾನುಗ್ರಹ ವಂಶದಲ್ಲಿ ಹುಟ್ಟಿದವರು ಪಾಂಡುರಂಗಿ ಹುಚ್ಚಾಚಾರ್ಯರು. ಪಾಂಡುರಂಗಿ ಮನೆತನದ ಇನಾಮು ಗ್ರಾಮವಾಗಿದ್ದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಭದ್ರಾಪುರ ಗ್ರಾಮ ಇವರ ಜನ್ಮಸ್ಥಳ. ತಂದೆಯ ಹೆಸರು ಶ್ರೀನಿವಾಸಾಚಾರ್ಯರು. ತಾಯಿ ರುಕ್ಮಿಣಿ ಬಾಯಿ. ಶಿಕಾರಿಪುರದಲ್ಲಿರುವ ಪ್ರಾಣದೇವರು ಹುಚ್ಚೂರಾಯನೆಂದು ಪ್ರಸಿದ್ಧ ನಾಗಿರುವುದರಿಂದ ಮಗುವಿಗೆ ಹುಚ್ಚೂರಾಯನೆಂದೇ ಹೆಸರಿಟ್ಟಿದ್ದರಂತೆ.

ಬೆಳೆವ ಗಿಡ ಮೊಳಕೆಯಲ್ಲಿ ನೋಡು ಎಂಬಂತೆ ಬಾಲ್ಯದಿಂದ ಹುಚ್ಚೂರಾಯನಿಗೆ ದೈವಭಕ್ತಿ ಟಿಸಿಲೊಡೆದು ಮಹಾವೃಕ್ಷವಾಗಲು ದೈವೀಕೃಪೆಗಾಗಿ ಕಾಯುತ್ತಿತ್ತು. ಆನಂದಭಟ್ಟರ ಕತೆಯನ್ನು ಕೇಳುತ್ತಿದ್ದ ಬಾಲಕ ಹುಚ್ಚೂರಾಯನಿಗೆ ತಾನೂ ಅವರಂತೆ ಕುಲದೇವತೆ ಕೊಲ್ಲಾಪುರ ಮಹಾಲಕ್ಷ್ಮೀಯ ಅನುಗ್ರಹ ಸಂಪಾದನೆ ಮಾಡಿ ಘನವಿದ್ವಾಂಸನಾಗಬೇಕೆಂಬ ಬಯಕೆ ಹೆಚ್ಚಿತು. ಅದೇ ಬಾಳಿನ ಗುರಿಯಾಯಿತು. ತಂದೆ ತಾಯಿಗಳಿಗೂ ಹೇಳದೆ ಪಾದಚಾರಿಯಾಗಿ ಹೊರಟು ಕೊಲ್ಲಾಪುರಕ್ಕೆ ಬಂದು ದೇವಿಯ ದರ್ಶನಮಾಡಿ ಸಾಷ್ಟಾಂಗವೆರಗಿದನು. ಕಣ್ತುಂಬ ದೇವಿಯ ದಿವ್ಯ ಸುಂದರ ರೂಪ, ಹೃದಯದಲ್ಲಿ ದೇವಿಯ ದರ್ಶನದಿಂದ ಬಾಳು ಸಾರ್ಥಕವೆನಿಸಿತು. ಅಂದಿನಿಂದ ಹುಚ್ಚೂರಾಯನಿಗೆ ಮಹಾಲಕ್ಷ್ಮೀಯ ಗುಡಿಯೇ ಮನೆಯಾಯಿತು. ಬೆಳಗಿನಿಂದ ರಾತ್ರಿಯವರೆಗೂ ದೇವಿಗೆ ಸಲ್ಲುವ ವಿವಿಧ ಸೇವೆಗಳನ್ನು ತನ್ಮಯವಾಗಿ ನೋಡುವುದು, ಲಕ್ಷ್ಮೀಅಷ್ಟೋತ್ತರ ಶತನಾಮ, ಲಕ್ಷ್ಮೀಸಹಸ್ರನಾಮ ಮುಂತಾದ ತನಗೆ ಬರುತ್ತಿದ್ದ ಲಕ್ಷ್ಮೀಸ್ತೋತ್ರಗಳನ್ನು ಪಾರಾಯಣ ಮಾಡುವುದು, ಲಕ್ಷ್ಮೀನಾಮ ಜಪಮಾಡುವುದು, ಕೈಲಾದಷ್ಟು ಪ್ರದಕ್ಷಿಣೆ ನಮಸ್ಕಾರಗಳನ್ನು ಸಲ್ಲಿಸುವುದು, ಬಂದ ಭಕ್ತಾದಿಗಳು ಕೊಡುತ್ತಿದ್ದ ಪ್ರಸಾದವೇ ಆಹಾರ. ಹೀಗೆ ಹುಚ್ಚೂರಾಯನಿಗೆ ಎಲ್ಲವೂ ಮಹಾಲಕ್ಷ್ಮೀಮಯವಾಗಿತ್ತು.

ದೇವಿಯು ಜಗನ್ಮಾತೆ ಮಾತೃವಾತ್ಸಲ್ಯದಿಂದ ತನ್ನ ಮಕ್ಕಳಿಗೆ ಅವರು ಕೇಳಿದುದ್ದನ್ನೆಲ್ಲ ಕೊಟ್ಟು ಕಾಪಾಡುತ್ತಾಳೆ. ಹುಚ್ಚೂರಾಯನಿಗೆ ಮಹಾಲಕ್ಷ್ಮಿಯ ಅನುಗ್ರಹವಾಯಿತು. ಅವನ ಬಯಕೆಯಂತೆ ಶಾಸ್ತ್ರ ವಿದ್ಯಾಪಾರಂಗತನಾಗುವ ಧ್ಯೇಯ ಸಾಧಿಸಿತು. ದೇವಿಯ ಪ್ರೇರಣೆಯಿಂದ ಕೊಲ್ಲಾಪುರದ ಶ್ರೀಮಂತರಲ್ಲೊಬ್ಬರಾಗಿದ್ದ ಅಂತಾಜಿ ಪಂತರೆಂಬ ಶ್ರೀಮಂತ ಸದ್ಗೃಹಸ್ಥರೊಬ್ಬರು ಹುಚ್ಚೂರಾಯನನ್ನು ತಮ್ಮ ಮನೆಗೆ ಕರೆದೊಯ್ದು ಮಗನಂತೆ ಲಾಲಿಸಿ ಪಾಲಿಸುತ್ತಾ ಸಕಲ ಶಾಸ್ತ್ರವಿದ್ಯೆಗಳನ್ನು ಗುರುಮುಖೇನ ಅಧ್ಯಯನವಾಗುವಂತೆ ಅವಕಾಶ ಮಾಡಿಕೊಟ್ಟರು. ಕೆಲವು ಕಾಲಾನಂತರ ಹುಚ್ಚೂರಾಯನು ದೇವಿಯ ಸೂಚನೆಯಂತೆ ಶಿಕಾರಿಪುರಕ್ಕೆ ಹಿಂತಿರುಗಿ ಗೃಹಸ್ಥಾಶ್ರಮ ಸ್ವೀಕರಿಸಿದನು. ಮುಂದೆ ದೇವಿಯ ಅನುಗ್ರಹದಿಂದ ಪಾಂಡುರಂಗೀ ಹುಚ್ಚಾಚಾರ್ಯರೆಂದೇ ಪ್ರಸಿದ್ಧರಾದರು. ಮಹಾಲಕ್ಷ್ಮಿಯು ಇವರ ಮೇಲಿಟ್ಟಿದ್ದ ಕರುಣೆ ಅಪಾರ. ಜೀವನದುದ್ದಕ್ಕೂ ದೇವಿಯು ಕಾಲಕಾಲಕ್ಕೆ ಸ್ವಪ್ನದಲ್ಲಿ ಕಾಣಿಸಿಕೊಳ್ಳುತ್ತಾ ಮಾರ್ಗದರ್ಶನ ಮಾಡುತ್ತಿದ್ದಳು. ಲಕ್ಷ್ಮೀದೇವಿಯ ಕೃಪೆಯಿಂದ ಕೀರ್ತಿಶಾಲಿ

ಗಳಾಗಿ ಬದುಕಿದರು. ಬಾಳಿನುದ್ದಕ್ಕೂ ದೇವಿಯ ಅಭಯಹಸ್ತ ಅವರನ್ನು ರಕ್ಷಿಸುತ್ತಿತ್ತು. ಕರುಣೆಯ ಕುಡಿನೋಟ ಭಾಗ್ಯಶಾಲಿಗಳನ್ನಾಗಿ ಮಾಡಿತ್ತು. ಭಗವಂತನ ಅನುಗ್ರಹವನ್ನೂ, ಅಪರೋಕ್ಷ ಜ್ಞಾನವನ್ನು ದೊರಕಿಸಿಕೊಟ್ಟಿತ್ತು.

ಪಾಂಡುರಂಗೀ ಹುಚ್ಚಾಚಾರ್ಯರು ಸಂಸ್ಕೃತದಲ್ಲಿ, ಶಾಸ್ತ್ರಗಳಲ್ಲಿ ಘನ ವಿದ್ವಾಂಸರಾಗಿದ್ದಂತೆ ಹರಿದಾಸರೂ ಆಗಿದ್ದು ಇಂದಿರೇಶ ಎಂಬ ಅಂಕಿತ ದಿಂದ ನೂರಾರು ಹಾಡುಗಳನ್ನು ರಚಿಸಿದ್ದಾರೆ. ಲಕ್ಷ್ಮೀದೇವಿಯನ್ನು ಸ್ತುತಿಸುವುದೆಂದರೆ ಇವರಿಗೆ ಬಹು ಆನಂದ. **"ಹೊಸ ಕಣ್ಣು ಹಚ್ಚಲಿಬೇಕು" ಜಗದಂಬ" ಬಾರೆ ನಮ್ಮನಿ ತನಕ ಭಾಗ್ಯದಾದೇವಿ" ಬಾರೆ ವೆಂಕಟರಮಣಿ "ಕೇಳಿ ಪೇಳಮ್ಮ ನಮ್ಮಮ್ಮ ಲಕುಮಿ"** ಮುಂತಾದ ಇವರ ಕೃತಿಗಳು ಅರ್ಥ ಪೂರ್ಣವಾಗಿದ್ದು ಪ್ರಸಿದ್ಧವಾಗಿವೆ. **106 ನುಡಿಗಳುಳ್ಳ "ಲಕ್ಷ್ಮೀ ಲೀಲಾಮೃತ"** ಎಂಬ ಒಂದು ಹಾಡನ್ನೂ ಬರೆದಿದ್ದಾರೆ. ಇದರಲ್ಲಿ ಆದಿ ಸೃಷ್ಟಿಯಿಂದಾ ರಂಭಿಸಿ ಶ್ರೀ ಹರಿಯ ಮೂಲ ಅವತಾರಗಳನ್ನು, ಅನಂತ ಗುಣಗಳನ್ನು ಅನಂತರೂಪಧರಿಸಿ ರಮಾದೇವಿ ಅವನ ಸೇವೆಗೈವುದನ್ನು ಅನುಪಮವಾಗಿ ಚಿತ್ರಿಸಿದ್ದಾರೆ. ಶ್ರೀ ಹರಿಯು ಅನಂತರೂಪಗಳಿಗೆ ಲಕ್ಷ್ಮೀರೂಪಗಳ ಹೆಸರು ಹೇಳಿ ಅವಳ ಮಹಿಮೆಯನ್ನು ನಾನಾ ಬಗೆಯಲ್ಲಿ ಸ್ತುತಿಸಿದ್ದಾರೆ. ಶುಕ್ರವಾರ ಸಂಧ್ಯಾಸಮಯದಲ್ಲಿ ಈ ಲಕ್ಷ್ಮೀಲೀಲಾಮೃತವನ್ನು ಶ್ರದ್ಧಾಭಕ್ತಿಗಳಿಂದ ಪಠಿಸಿದರೆ ಧನಧಾನ್ಯಾದಿ ಸಂಪತ್ತು, ಜ್ಞಾನ, ಭಕ್ತಿ, ವೈರಾಗ್ಯಾದಿಗಳು ದೊರೆತು ಲಕ್ಷ್ಮೀನಾರಾಯಣರ ಅನುಗ್ರಹ ಪ್ರಾಪ್ತಿಯಾಗುತ್ತದೆ.

ನಾಮಗಿರಿಯಮ್ಮನನೊಲಿಸಿದ ಶ್ರೀ ವಿದ್ಯಾರತ್ನಾಕರತೀರ್ಥರು

ಶ್ರೀಹರಿಯ ಅನಂತರೂಪಗಳಿಗೆ ಅನುಗುಣವಾದ ಅನಂತರೂಪಗಳನ್ನು ಲಕ್ಷ್ಮೀದೇವಿಯು ಧರಿಸುತ್ತಾಳೆ. ಅರ್ಚಾವತಾರಗಳಲ್ಲೂ ಅವನ ಹೆಸರುಗಳಿಗೆ ಅನುರೂಪವಾದ ಹೆಸರುಗಳನ್ನೇ ತಾನೂ ತಾಳುತ್ತಾಳೆ. ಅವನು ಶ್ರೀನಿವಾಸನಾದರೆ ಅವಳು ಪದ್ಮಾವತಿ. ಅವನು ರಂಗನಾಥನಾದರೆ ಅವಳು ರಂಗನಾಯಕಿ. ಅವನು ಚೆಲುವ ನಾರಾಯಣನಾದರೆ ಅವಳು ಚೆಲುವ ನಾಯಕಿ. ಹಾಗೆಯೇ ತಮಿಳುನಾಡಿನ ಪ್ರಸಿದ್ಧ ಯಾತ್ರಾಸ್ಥಳವಾದ ನಾಮಕ್ಕಲ್ ನಲ್ಲಿ ಶ್ರೀಮನ್ನಾರಾಯಣನು ನಾಮಕ್ಕಲ್ ನರಸಿಂಹನೆನಿಸಿದ್ದರೆ ದೇವಿಯು ನಾಮಗಿರಿಯಮ್ಮನೆಂದೇ ಪ್ರಸಿದ್ಧಿಯಾಗಿದ್ದಾಳೆ. ನರಸಿಂಹನಿಗೂ ಒಂದು ಕೈಮಿಗಿಲಾದ ಖ್ಯಾತಿ ನಾಮಗಿರಿಯಮ್ಮನದು. ಸಕಲ ಲಕ್ಷಣ ಸಂಪನ್ನವಾದ

ದಿವ್ಯಾಭರಣಭೂಷಿತವಾದ, ತೇಜಃ ಪುಂಜವಾದ ಮಾತೃ ವಾತ್ಸಲ್ಯವೇ ಮೈವೆತ್ತಿರುವಂತಹ ದಿವ್ಯ ಮಂಗಳ ವಿಗ್ರಹ ದೇವಿಯದು. ತನ್ನನ್ನು ಸೇವಿಸುವವರ ಇಷ್ಟಾರ್ಥಗಳನ್ನು ಬೇಡಿದುದಕ್ಕಿಂತಲೂ ಮಿಗಿಲಾಗಿ ಕೊಡುತ್ತಾಳೆ. ಅದಕ್ಕೊಂದು ನಿದರ್ಶನ ವಿದ್ಯಾರತ್ನಾಕರತೀರ್ಥರ ಅನುಭವ.

ಶ್ರೀವ್ಯಾಸರಾಯಮಠದ ವಿದ್ಯಾಸಿಂಹಾಸನಾಧೀಶ್ವರರಾಗಿದ್ದ ಶ್ರೀ ವಿದ್ಯಾರತ್ನಕರ ತೀರ್ಥರು ನಾಮಗಿರಿಯಮ್ಮನ ಪರಮ ಭಕ್ತರು. ಅವರ ಪ್ರಶಿಷ್ಯರಾದ ಶ್ರೀ ವಿದ್ಯಾಪ್ರಸನ್ನತೀರ್ಥರು ನಾಮಗಿರಿಯಮ್ಮನ ಕರುಣೆಯ ಕಂದ. ವಿದ್ಯಾರತ್ನಾಕರ ತೀರ್ಥರ ಪೂರ್ವಾಶ್ರಮದ ಹೆಸರು ತೆಕ್ಕಲೂರು ಆಹೋಬಲಾಚಾರ್ಯರೆಂದು. ಅವರಿಗೆ ಜನಿಸಿದ ಏಳು ಮಕ್ಕಳೂ ಶೈಶವದಲ್ಲಿಯೆ ವಿಧಿವಶರಾಗಿ ಕಡೆಗೆ ಅವರ ಪತ್ನಿಯು ಮರಣವನ್ನಪ್ಪಿ ಆಚಾರ್ಯರು ದುಃಖಾಕ್ರಾಂತರಾಗಿರಲು ಆಗ ವ್ಯಾಸರಾಯ ಮಠಾಧೀಶ ರಾಗಿದ್ಧ ಶ್ರೀ ವಿದ್ಯಾ ಶ್ರೀ ಸಿಂಧುತೀರ್ಥರು ಅವರನ್ನು ಸಂತೈಸಿ ತಮ್ಮ ಪೂರ್ವಾಶ್ರಮದ ತೃತೀಯ ಕುಮಾರಿ ಸತ್ಯಭಾಮಾ ಎಂಬುವರೊಡನೆ ಆಚಾರ್ಯರಿಗೆ ವಿವಾಹ ಜರುಗಿಸಿದರು. ಆದರೇನು ಮಾಡುವುದು. ಆಚಾರ್ಯರ ಎರಡನೇ ಪತ್ನಿಗೆ ಜನಿಸಿದ ಮೂರು ಶಿಶುಗಳೂ ಶೈಶವದಲ್ಲೆ ಕಣ್ಮುಚ್ಚಿದವು. ತಮಗೆ ಸಂತಾನಯೋಗವೇ ಇಲ್ಲವೇನೋ ಎಂದು ಆಚಾರ್ಯರು ಚಿಂತಾಕುಲರಾಗಿ ರಂಗನಾಥನ ಸಾನ್ನಿಧ್ಯದಲ್ಲಿರಲು ಬಯಸಿ ಶ್ರೀರಂಗಕ್ಕೆ ತೆರಳಿದರು. ಶ್ರೀರಂಗಕ್ಕೆ ನಾಮಕ್ಕಲ್ ಬಹು ಸಮೀಪ. ನಾಮಗಿರಿ ಯಮ್ಮನ ವರಪ್ರಸಾದಿತ್ವದ ಬಗ್ಗೆ ಕೇಳಿ ತಿಳಿದ ಆಚಾರ್ಯರು ಸಂತಾನ ಪ್ರಾಪ್ತಿಗಾಗಿ ದೇವಿಯನ್ನೇ ಮೊರೆ ಹೋಗಲು ನಿರ್ಧರಿಸಿದರು. ದಂಪತಿಗಳು ಪಯೋವ್ರತವನ್ನು ಮಾಡಲು ನಿಶ್ಚಯಿಸಿ (ಎಂದರೆ ದೇವರಿಗೆ ನೈವೇದ್ಯವಾದ ಹಾಲನ್ನು ಮಾತ್ರಾ ಆಹಾರವಾಗಿ ಸ್ವೀಕರಿಸುತ್ತಾ) 25 ದಿವಸಗಳ ಕಾಲ ದೇವಸ್ಥಾನದ ಪ್ರಾಕಾರದಲ್ಲಿ ಉರುಳುಸೇವೆ ಸಲ್ಲಿಸುತ್ತಾ ಜೊತೆಗೆ ನಮಸ್ಕಾರ, ಜಪ, ಸ್ತೋತ್ರಾದಿಗಳಿಂದಲೂ ಅರ್ಚಿಸುತ್ತಾ ತದೇಕ ಚಿತ್ತದಿಂದ ಸಂತಾನ ವನ್ನು ಕರುಣಿಸುವಂತೆ ಪ್ರಾರ್ಥಿಸಿದರು.

"ನರಹರಿಜಾಯೇ ನಾಮಗಿರಮ್ಮ
ಕರುಣದಿ ನೋಡೇ ನಾಮಗಿರಮ್ಮ
ಕಷ್ಟಗಳೆಲ್ಲ ನಷ್ಟವಾಗುವ ಪರಿ

ದೃಷ್ಟಿ ಎನ್ನೊಳಗಿಟ್ಟು
ವರಗಳನೀಡೆ ಇಂದಿರೆ ಎನ್ನ
ಸುಖಿಯನ್ನು ಮಾಡೆ ನಾಮಗಿರಮ್ಮ"

ಇವರ ಕಾಯಾ ವಾಚಾ ಮನಸಾ ತ್ರಿಕರಣ ಸೇವೆಯಿಂದ ಸಂತುಷ್ಟಳಾದ ನಾಮಗಿರಿಯಮ್ಮನು ಆಚಾರ್ಯರಿಗೆ ಸ್ವಪ್ನದಲ್ಲಿ ದರ್ಶನವಿತ್ತು ದಂತದ ಹಣಿಗೆಯೊಂದನ್ನು ನೀಡಿ ಅವರನ್ನು ಅನುಗ್ರಹಿಸಿದಳು. ಕಾಲ ಕ್ರಮೇಣ ಆಚಾರ್ಯ ದಂಪತಿಗಳಿಗೆ ಮೂರು ಹೆಣ್ಣು ಮಕ್ಕಳು ಹಾಗೂ ಒಬ್ಬ ಪುತ್ರರತ್ನನೂ ಜನಿಸಿದರು. ಈ ಗಂಡು ಮಗುವಿಗೆ ನರಸಿಂಹಾಚಾರ್ಯ ನೆಂದೇ ಹೆಸರಿಟ್ಟರು. ಅವರೇ ಮುಂದೆ ವ್ಯಾಸರಾಯ ಮಠದ ಸಂಸ್ಥಾನಾಧೀಶ ರಾದ ಶ್ರೀ ವಿದ್ಯಾಪ್ರಸನ್ನತೀರ್ಥರೆಂಬ ಅಭಿದಾನದಿಂದ ಬೆಳಗಿದ ವಿಭೂತಿ ಪುರುಷರು. ವಿದ್ಯಾರತ್ನಕರತೀರ್ಥರು ಸಂಸ್ಕೃತ ಮತ್ತು ಮಾತೃ ಭಾಷೆಯಾದ ಕನ್ನಡ ಎರಡರಲ್ಲೂ ಹಲವಾರು ಕೃತಿಗಳನ್ನು ರಚಿಸಿದ್ದು ಅವರ ಅಂಕಿತ ನಾಮ ಗಿರಿ ನರಹರಿ ಎಂದೇ ಆಗಿದೆ. ಸಂತಾನ ಲಕ್ಷ್ಮೀ ಸ್ವರೂಪಳಾಗಿ ತಮಗೆ ಸತ್‌ಸಂತಾನವನ್ನು. ಕರುಣಿಸಿದ ನಾಮಗಿರಿಯಮ್ಮನೆಂದರೆ ವಿದ್ಯಾರತ್ನಾಕರ ತೀರ್ಥರಿಗೆ ಬಹು ಭಕ್ತಿ. ಅವಳನ್ನು ಹಲವಾರು ಸುಂದರ ಹಾಡುಗಳಲ್ಲಿ ಮನದುಂಬಿ ಕೊಂಡಾಡಿದ್ದಾರೆ. ನಾಮಗಿರಿಯಮ್ಮನ ಕರುಣೆಯ ಕಂದ ಶ್ರೀ ವಿದ್ಯಾಪ್ರಸನ್ನ ತೀರ್ಥರು ವಿದ್ಯಾರತ್ನಾಕರ ತೀರ್ಥರ ಪೂರ್ವಾಶ್ರಮ ಪುತ್ರರೂ ಹೌದು. ಪ್ರಶಿಷ್ಯರು ಹೌದು. ಮಾತೃ ದೇವತೆ ಮಹಾಲಕ್ಷ್ಮೀ ದೇವಿಯನ್ನು **"ಅಂಭೋರುಹೇಕ್ಷಣೆ ಜಗದಂಬಾ", ಕವಳ ತಾಯಿ ಕವಳ ಅಮ್ಮಾ", ವಾರಿಜಗಣ ನಿಲಯೇ ಕಮನೀಯ ಕಾಯೇ, ನರಹರಿ ಚಾಯೇ"** ಮುಂತಾದ ಮನೋಜ್ಞ ಕೃತಿಗಳಲ್ಲಿ ಹಾಡಿ ಪಾಡಿ ಕೊಂಡಾಡಿದ್ದಾರೆ. ನಾಮಕಲ್‌ಗೆ ಹೋದ ಯಾತ್ರಾರ್ಥಿಗಳು, ನಾಮಗಿರಿಯಮ್ಮನನ್ನು ಸಂದರ್ಶಿಸಿ, ಅವಳ ಮಹಿಮೆಯನ್ನು ಸ್ತುತಿಸುವ ವಿದ್ಯಾರತ್ನಾಕರತೀರ್ಥರ ಕೃತಿಗಳನ್ನು ಅವಳೆದುರು ಹಾಡಿ ಸ್ತುತಿಸಿ ದೇವಿ ಕೃಪೆಗೆ ಪಾತ್ರರಾಗಬಹುದು.

ಶ್ರೀಲಕ್ಷ್ಮೀ ಕಮಲಾ ವಸುಮತೀ ರಾಮಾ ಜಗದ್ರಕ್ಷಣಿ
ಕಲ್ಯಾಣಿ ಸಕಲೇಶ್ವರೀ ಸರಸಿಜಾ ಭಾಗ್ಯಾನು ಸಂಧಾಯಿನೀ
ಶೋಭಾಂಗೀ ವಿಮಲೇಕ್ಷಣೆ ವಿಮಲಿನೀ ನಾರಾಯಣೀ ಶ್ರೀಕರೀ
ಪಾಯನ್ನಸ್ಸಕಲೇಷ್ಟದಾ ಭಗವತೀ ಕುರ್ಯಾದ್ ಸದಾಮಂಗಳಂ||

ಸುಶೀಲಾ ಪ್ರಕಾಶನ
"ಭೀಮಸೇನಾ", ನಂ.52-1/71-1, ಗಾಂಧಿಬಜಾರ್
ಬೆಂಗಳೂರು-04, ಮೊಬೈಲ್ : 9448409399